بِسْمِ اللّٰهِ الرَّحْمٰنِ الرَّحِيْمِ نَحْمَدُهٗ وَنُصَلِّيْ عَلٰى رَسُوْلِهِ الْكَرِيْمِ وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 04

ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ಸಂಚಿಕೆ: 23

ವಾರ್ಷಿಕ ಶುಲ್ಕ ರೂ.600/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

08 ಜೂನ್ 2023, 08 ಎಹ್ಸಾನ್ 1402 ಹಿಜರಿ ಶಮ್ಸಿ, 18 ಝಿಲ್‌ಖಅ್‌ದಃ 1444 ಹಿಜರಿ ಖಮರಿ.


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

وَرَحْمَتِيْ وَسِعَتْ كُلَّ شَيْءٍ فَسَاَكْتُبُهَا لِلَّذِيْنَ يَتَّقُوْنَ وَيُؤْتُوْنَ الزَّكٰوةَ وَالَّذِيْنَ هُمْ بِاٰيٰتِنَا يُؤْمِنُوْنَ (اعراف:157)

**(ಅಲ್-ಅಅ್‌ರಾಫ್: 157)**

**ಅಂದರೆ: ನನ್ನ ಕರುಣೆಯು ಸರ್ವವನ್ನೂ ಆವರಿಸಿಕೊಂಡಿದೆ. ಆದ್ದರಿಂದ ಭಯಭಕ್ತಿ ಹೊಂದಿದವರಿಗೂ ಝಕಾತ್ ನೀಡುವವರಿಗೂ ನಮ್ಮ ದೃಷ್ಟಾಂತಗಳಲ್ಲಿ ವಿಶ್ವಾಸವಿರಿಸುವವರಿಗೂ ಅದನ್ನು (ಕರುಣೆಯನ್ನು) ನಾನು ವಿಧಿಸಿದ್ದೇನೆ.'**

## ಪ್ರವಾದಿ ಮುಹಮ್ಮದ್[ಸ]ರವರ ಉಪದೇಶ

### ಮೃದುವಾಗಿ ವಿನಂತಿಸಲು

**(2391)** ಹಝ್ರತ್ ಹುಝೈಫ(ರ) ವರದಿ ಮಾಡುತ್ತಾರೆ ನಾನು ಪ್ರವಾದಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮ್ ಅವರಿಂದ ಹೀಗೆ ಕೇಳಿದೆ. ಅವರು(ಸ) ಹೇಳುತ್ತಿದ್ದರು: ಒಬ್ಬ ವ್ಯಕ್ತಿ ಮರಣ ಹೊಂದಿದನು ಮತ್ತು ಆತನನ್ನು ನೀನು ಏನು ಮಾಡುತ್ತಿದ್ದೆ? ಎಂದು ಕೇಳಲಾಯಿತು. ಅದಕ್ಕೆ ಆತನು ಉತ್ತರಿಸಿದನು: ನಾನು ಜನರೊಂದಿಗೆ ವ್ಯಾಪಾರ ಮಾಡುತ್ತಿದ್ದೆ ಮತ್ತು ಶ್ರೀಮಂತರಿಗೆ ವಿಶ್ರಾಂತಿ ನೀಡುತ್ತಿದ್ದೆ ಮತ್ತು ನಿರ್ಗತಿಕರನ್ನು ಕ್ಷಮಿಸುತ್ತಿದ್ದೆ, ಆದ್ದರಿಂದ ಅವನು ಕ್ಷಮಿಸಲ್ಪಟ್ಟನು.

ಹಝ್ರತ್ ಅಬು ಮಸ್‌ಊದ್(ರ) ಹೇಳಿದರು: ನಾನು ಸಹ ಪ್ರವಾದಿ(ಸ) ಅವರಿಂದ ಇದನ್ನು (ಹದೀಸ್) ಕೇಳಿದೆ.

### ನಿಮ್ಮಲ್ಲಿ ಒಳ್ಳೆಯವರು ಯಾರೆಂದರೆ ಅವರು ತಮ್ಮ ಸಾಲವನ್ನು ಉತ್ತಮ ರೀತಿಯಲ್ಲಿ ಪಾವತಿಸುತ್ತಾರೆ

**(2305)** ಹಝ್ರತ್ ಅಬು ಹುರೈರಾ(ರ) ವರದಿ ಮಾಡುತ್ತಾರೆ ರಸೂಲುಲ್ಲಾಹ್(ಸ) ಅವರು ಒಬ್ಬ ವ್ಯಕ್ತಿಯ ಒಂದು ವರ್ಷದ ಮರಿ ಒಂಟೆಗೆ ಸಾಲಗಾರ ಆಗಿದ್ದರು. ಅವನು ರಸೂಲುಲ್ಲಾಹ್(ಸ) ರವರನ್ನು ಕೇಳಲು ಬಂದನು. ಅದಕ್ಕೆ ರೂಲುಲ್ಲಾಹ್(ಸ) ಹೇಳಿದರು: ಅವನಿಗೆ ಕೊಡಿ. ಅದಕ್ಕೆ ಅವರು ಈ ವಯಸ್ಸಿನ ಒಂಟೆಯನ್ನು ಹುಡುಕಿದರು ಆದರೆ ಒಂದು ವರ್ಷದ ಒಂಟೆ ಅವರಿಗೆ ಕಂಡುಬಂದಿಲ್ಲ, ಅದಕ್ಕಿಂತ ದೊಡ್ಡ ಪ್ರಾಯದ ಒಂಟೆ ಕಂಡುಬಂತು. ಅದಕ್ಕೆ ರಸೂಲುಲ್ಲಾಹ್(ಸ) ಹೇಳಿದರು: ಅವನಿಗೆ (ದೊಡ್ಡ ಪ್ರಾಯದ ಒಂಟೆ) ನೀಡಿ. ಆ ವ್ಯಕ್ತಿ ಹೇಳಿದನು: ನೀವು (ನನ್ನ ಹಕ್ಕಿಗಿಂತ ಹೆಚ್ಚು) ಪಾವತಿಸಿದ್ದೀರಿ. ಅಲ್ಲಾಹನು ನಿಮಗೂ ಸಹ ಹೆಚ್ಚಾಗಿ ನೀಡಲಿ. ರಸೂಲುಲ್ಲಾಹ್(ಸ) ಹೇಳಿದರು: ನಿಮ್ಮಲ್ಲಿ ಒಳ್ಳೆಯವರು ಯಾರು ಎಂದರೆ ಅವರು ತಮ್ಮ ಸಾಲವನ್ನು ಉತ್ತಮ ರೀತಿಯಲ್ಲಿ ಪಾವತಿಸುತ್ತಾರೆ. **(ಸಹೀಹ್ ಬುಖಾರಿ, ಸಂಪುಟ-4, ಕಿತಾಬ್ ಅಲ್-ಇಸ್ತಿಕ್ರಾತ್, 2008 ಖಾದಿಯಾನ್ ಪ್ರಕಟಿತ)**

## ನನ್ನ ಜಮಾಅತ್‌ನಲ್ಲಿರುವ ಮತ್ತು ನನ್ನ ಉದ್ದೇಶವನ್ನು ಒಪ್ಪದ ವ್ಯಕ್ತಿಯು ಒಣ ಕೊಂಬೆಯಾಗಿದ್ದಾನೆ

### ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

ನಾನು ಒಂದು ಪುಸ್ತಕವನ್ನು ತಯಾರಿಸುತ್ತಿದ್ದೇನೆ. ಇದರಲ್ಲಿ ತಮ್ಮ ಭಾವನೆಗಳನ್ನು ನಿಯಂತ್ರಿಸಲು ಸಾಧ್ಯವಾಗದ ಎಲ್ಲರನ್ನು ಪ್ರತ್ಯೇಕಗೊಳಿಸಲಾಗುವುದು. ಸಣ್ಣಪುಟ್ಟ ವಿಷಯಗಳಿಗೂ ಜಗಳಗಳು ನಡೆಯುತ್ತವೆ. ಉದಾಹರಣೆಗೆ, ಒಬ್ಬ ಆಟಗಾರನು ಹತ್ತು ಗಜಗಳಷ್ಟು ಜಿಗಿದಿದ್ದಾನೆ ಎಂದು ಒಬ್ಬ ವ್ಯಕ್ತಿ ಹೇಳಿದರೆ. ಇನ್ನೊಬ್ಬನು ಅದನ್ನು ಕುರಿತು ವಾದಿಸಲು ಕುಳಿತುಕೊಳ್ಳುತ್ತಾನೆ ಹೀಗೆ ಅಸಮಾಧಾನ ಉಂಟಾಗುತ್ತದೆ. ನೆನಪಿಡಿರಿ, ದ್ವೇಷದ ಪ್ರತ್ಯೇಕತೆಯು ಮಹದಿಯ ಸಂಕೇತವಾಗಿದೆ ಮತ್ತು ಆ ಚಿಹ್ನೆಯು ಈಡೇರುವುದಿಲ್ಲವೇ? ಅದು ಅವಶ್ಯವಾಗಿ ಈಡೇರುವುದು. ನೀವು ಏಕೆ ತಾಳ್ಮೆವಹಿಸುವುದಿಲ್ಲ? ಕೆಲವು ರೋಗಗಳು ನಿರ್ಮೂಲನೆಯಾಗುವವರೆಗೂ ರೋಗವು ನಿರ್ಮೂಲನೆಯಾಗುವುದಿಲ್ಲ ಎಂಬುದು ವೈದ್ಯಕೀಯ ಸಮಸ್ಯೆಯಾಗಿದೆ. ಇನ್ಶಾಅಲ್ಲಾಹ್, ನನ್ನ ಅಸ್ತಿತ್ವದಿಂದ ನೀತಿವಂತ ಜಮಾಅತ್ ಹುಟ್ಟುತ್ತದೆ. ಪರಸ್ಪರ ದ್ವೇಷಕ್ಕೆ ಕಾರಣವೇನು? ಜಿಪುಣತನ, ದುರಾಸೆ, ಸ್ವಾರ್ಥ ಮತ್ತು ಭಾವನೆಗಳಿವೆ. ನಾನು ಶೀಘ್ರದಲ್ಲೇ ಒಂದು ಪುಸ್ತಕವನ್ನು ಬರೆಯುತ್ತೇನೆ ಮತ್ತು ತಮ್ಮ ಭಾವನೆಗಳನ್ನು ನಿಯಂತ್ರಿಸಲಾಗದ ಮತ್ತು ಪ್ರೀತಿ ಮತ್ತು ಸಹೋದರತೆಯಿಂದ ಬದುಕಲು ಸಾಧ್ಯವಾಗದ ಎಲ್ಲರನ್ನು ಜಮಾತ್‌ನಿಂದ ಪ್ರತ್ಯೇಕಿಸುತ್ತೇನೆ ಎಂದು ಹೇಳಿದ್ದೇನೆ. ಇಂತಹವರು ನೆನಪಿಡಿರಿ, ಅವರು ಉತ್ತಮ ಉದಾಹರಣೆಯನ್ನು ತೋರಿಸದ ಹೊರತು ಅವರು ತಾತ್ಕಾಲಿಕ ಅತಿಥಿಗಳಾಗಿದ್ದಾರೆ. ನಾನು ಯಾರ ಕಾರಣಕ್ಕೂ ತನ್ನ ಬಗ್ಗೆ ಆಕ್ಷೇಪಣೆಗೆ ಒಳಗಾಗಲು ಬಯಸುವುದಿಲ್ಲ. ನನ್ನ ಜಮಾಅತ್‌ನಲ್ಲಿರುವ ಮತ್ತು ನನ್ನ ಉದ್ದೇಶವನ್ನು ಒಪ್ಪದ ವ್ಯಕ್ತಿಯು ಒಣ ಕೊಂಬೆಯಾಗಿದ್ದಾನೆ. ಮಾಲಿಯು ಅದನ್ನು ಕಡಿಯದಿದ್ದರೆ ಏನು ಮಾಡಬೇಕು? ಒಣ ಕೊಂಬೆಯೊಂದು ಹಸಿರು ಕೊಂಬೆಯ ಪಕ್ಕದಲ್ಲಿ ಕುಳಿತು ನೀರು ಹೀರುತ್ತದೆ ಹೊರತು ಅದು ಹಸಿರಾಗಲು ಸಾಧ್ಯವಿಲ್ಲ ಆದರೆ ಆ ಕೊಂಬೆಯೂ ಇನ್ನೊಂದನ್ನು ಸಹ ತೆಗೆದುಕೊಳ್ಳುತ್ತದೆ. ಆದ್ದರಿಂದ ಭಯಪಡಿರಿ. ತನ್ನನ್ನು ತಾನೇ ಗುಣಪಡಿಸಿಕೊಳ್ಳದವನು ನನ್ನೊಂದಿಗೆ ಉಳಿಯುವುದಿಲ್ಲ.

**(ಮಲ್‌ಫೂಝಾತ್, ಸಂಪುಟ-1, ಪುಟ-458, ಪ್ರಕಟಿತ 2018 ಖಾದಿಯಾನ್)**

**ಒಬ್ಬ ವ್ಯಕ್ತಿಯು ತನ್ನ ಕಾರ್ಯಗಳಲ್ಲಿ ಬಹಳ ಎಚ್ಚರಿಕೆಯಿಂದ ಮತ್ತು ಜಾಗರೂಕತೆಯಿಂದ ಇರಬೇಕು ಏಕೆಂದರೆ ಕ್ರಿಯೆಗಳನ್ನು ಅಳಿಸುವುದು ತುಂಬಾ ಕಷ್ಟದ ಕೆಲಸವಾಗಿದೆ. ಆದ್ದರಿಂದ ಹೆಚ್ಚಿನ ಎಚ್ಚರಿಕೆಯ ಅವಶ್ಯಕತೆಯಿದೆ, ಮಾನವ ಕ್ರಿಯೆಯ ಫಲಿತಾಂಶವು ಬೇಗ ಅಥವಾ ಕೆಳವು ಸಮಯದ ನಂತರ ಬರುತ್ತದೆ, ಆದರೆ ಅದು ಖಂಡಿತವಾಗಿಯೂ ಹೊರಬರುತ್ತದೆ**

ಸಯ್ಯದ್‌ನಾ ಹಝ್ರತ್ ಮುಸ್ಲಿಹ್ ಮೌಊದ್(ರ) ಸೂರ ಬನೀ ಇಸ್ರಈಲ್‌ನ ಆಯತ್ 14 **ವಕುಲ್ಲ ಇನ್ಸಾನಿನ್ ಅಲ್‌ಝಮ್‌ನಾಹು ತಾಇರಹೂ ಫೀ ಉನುಖಿಹೀ; ವ ನುಖ್ರಿಜು ಲಹೂ ಯೌಮಲ್ ಖಿಯಾಮತಿ ಕಿತಾಬಯ್ಯಲ್‌ಖಾಹು ಮನ್‌ಶೂರ** (ಅಂದರೆ: ಪ್ರತಿಯೊಬ್ಬನ ಕರ್ಮವನ್ನು ನಾವು ಅವನ ಕೊರಳಿಗೆ ಕಟ್ಟಿದ್ದೇವೆ. ಪುನರುತ್ಥಾನ ದಿನದಂದು ಅವನಿಗೋಸ್ಕರ ಒಂದು ಪುಸ್ತಕವನ್ನು ನಾವು ಹೊರತರುವೆವು. ಅದನ್ನು ತೆರೆದಿಟ್ಟಿರುವುದಾಗಿ ಅವನು ಕಾಣುವನು) ಅನ್ನು ವ್ಯಾಖ್ಯಾನಿಸುತ್ತ ಹೇಳುತ್ತಾರೆ:

ಈ ಆಯತ್‌ನಲ್ಲಿ, ನಾವು ಒಬ್ಬ ಮನುಷ್ಯನ ಕರ್ಮಗಳನ್ನು ಅವನ ಕೊರಳಿಗೆ ಕಟ್ಟಿದ್ದೇವೆ ಅಥವಾ ಅವನ ಕೊರಳಿಗೆ ಜೋಡಿಸಿದ್ದೇವೆ ಮತ್ತು ಪುನರುತ್ಥಾನದ ದಿನದಂದು ನಾವು ಅದನ್ನು ಪುಸ್ತಕದ ರೂಪದಲ್ಲಿ ಅವನ ಮುಂದೆ ತೆರೆದುಕೊಳ್ಳುತ್ತೇವೆ ಎಂದು ಹೇಳುತ್ತಾನೆ. ಅಂದರೆ, ಅದರ ಪ್ರಕಾರ ಅವನೊಂದಿಗೆ ವ್ಯವಹರಿಸಲಾಗುವುದು. ಏಕೆಂದರೆ ಖಾತೆಯನ್ನು ಬರೆಯಲು ಅಥವಾ ಖಾತೆಯನ್ನು ಹೊಂದಿಸಲು ಖಾತೆಯ ರಿಜಿಸ್ಟರ್ ಅನ್ನು ತೆರೆಯಲಾಗುತ್ತದೆ.

ಈ ಆಯತ್‌ನಲ್ಲಿ, ಪ್ರತಿಯೊಬ್ಬ ಮನುಷ್ಯನು ಅವನ ಕರ್ಮಗಳನ್ನು ಅವನ ಕೊರಳಿಗೆ ಜೋಡಿಸಿರುವುದರಿಂದ ಅವನ ಯಾವುದೇ ಕಾರ್ಯಗಳು ವ್ಯರ್ಥವಾಗುವುದಿಲ್ಲ ಎಂದು

*(ಪುಟ 09 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

"ನಾವಂತು ಅಲ್ಲಾಹನ ಕಡೆಯಿಂದ ಸಹನೆದೋರಲಿಕ್ಕಾಗಿಯೇ ಕಳುಹಿಸಲ್ಪಟ್ಟಿದ್ದೇವೆ." (ಹಝ್ರತ್ ಮಸೀಹ್ ಮೌಊದ್[ಅ])

ಸಹನೆದೋರುವುದು ಮತ್ತು ಕಾನೂನು ಪಾಲನೆ ಪ್ರವಾದಿಗಳ ಜಮಾಅತ್‌ನ ಕಾರ್ಯವಾಗಿದೆ.

ಹಝ್ರತ್ ಮಸೀಹ್ ಮೌಊದ್(ಅ) ಅಸಂಖ್ಯಾತ ಸಂದರ್ಭಗಳಲ್ಲಿ ಜಮಾಅತನ್ನು ಸಹನೆದೋರುವ ಉಪದೇಶವನ್ನ ನೀಡಿದ್ದಾರೆ. ದುಆ ಮಾಡಲು ಉಪದೇಶವನ್ನು ನೀಡಿದ್ದಾರೆ ಮತ್ತು ಸ್ಪಷ್ಟಪಡಿಸಿದರು. ದುರ್ಬಲ ಕಾಲುಗಳು ಹೊಂದಿರುವವರು ಮತ್ತು ಮುಳ್ಳಿನ ಮಾರ್ಗಗಳಲ್ಲಿ ನಡೆಯಲು ಸಾಧ್ಯವಿಲ್ಲದವರು ಮತ್ತು ಸಹನೆಯ ಶಕ್ತಿ ಇಲ್ಲದವರು, ನಿಸ್ಸಂದೇಹವಾಗಿಯೂ ನನ್ನನ್ನು ಬಿಟ್ಟು ಹೋಗಬಹುದು.

ಈ ಸಹಿಷ್ಣುತೆ ಮಾದರಿಯೇ ಜಮಾಅತನ್ನು ಲೋಕದಲ್ಲಿ ಒಂದು ವಿಶಿಷ್ಟ ಸ್ಥಾನ ಪಡೆಯಲು ಸಾಧ್ಯವಾಗಿದೆ.

ನಾನು ಕಾಲಘಟ್ಟದ ಇಮಾಮರನ್ನು ನಂಬಿದ್ದೇವೆ. ಅವರು ಶಾಂತಿಯನ್ನು ಸ್ಥಾಪಿಸಲು ಮತ್ತು ಅಲ್ಲಾಹನ ಅನುಗ್ರಹಗಳ ವಾರಸುದಾರರಾಗಲು ನಮಗೆ ಈ ಶಿಕ್ಷಣವನ್ನು ನೀಡಿದ್ದಾರೆ. ನೀವು ಸಹನೆಯಿಂದ ವರ್ತಿಸಬೇಕು. ಸಹನೆಯು ಪ್ರವಾದಿಗಳ ಮುಖ್ಯವಾದ ಮತ್ತು ಆದ್ಯ ಕರ್ತವ್ಯಗಳಲ್ಲಿ ಒಂದಾಗಿದೆ. ಅದರ ಹೊರತು ಜಮಾಅತ್ ಪ್ರಗತಿ ಹೊಂದಲು ಸಾಧ್ಯವಿಲ್ಲ. ಈ ಸಹನೆಯೇ ಲೋಕವನ್ನು ಹಿಂಬಾಲಿಸಲು ಪ್ರೇರಕವಾಗುತ್ತದೆ.

ದೃಢಚಿತ್ತತೆಯಿಂದ ತನ್ನ ಆತ್ಮವನ್ನು ಪರಿಶುದ್ಧಗೊಳಿಸುವುದು ಸಹನೆಯ ಮೂಲವಾಗಿದೆ. ಇಂತಹ ಜನರಿಗಾಗಿಯೇ ಅಲ್ಲಾಹನು ಸಹಾಯಕ್ಕೆ ಬರುವನು, ಅವನು ಯಾವ ರೀತಿ ಸಹಾಯ ನೀಡುವುದೆಂದು ಊಹಿಸಲೂ ಸಾಧ್ಯವಿಲ್ಲ.

ಇದು ಸದಾ ನೆನಪಿರಲಿ. ಈ ಸಹನೆದೋರುವಿಕೆ ಯಾವುದೇ ದುರ್ಬಲತೆಯ ಕಾರಣದಿಂದಾಗಬಾರದು ಅಥವಾ ಯಾವುದೇ ಲೋಕದ ಭಯದ ಕಾರಣದಿಂದ ಆಗಬಾರದು, ಬದಲು ಕೇವಲ ಅಲ್ಲಾಹನ ಸಂಪ್ರೀತಿಗಾಗಿ ಆಗಿರಬೇಕು. ಇದುವೇ ನಿಜವಾದ ಸಹನೆಯಾಗಿದೆ. ಅದು ಅಲ್ಲಾಹನ ಅನುಗ್ರಹಗಳನ್ನು ತನ್ನೆಡೆಗೆ ಸೆಳೆಯುತ್ತದೆ.

ಪ್ರವಾದಿಗಳ ಸುನ್ನತ್ (ವಾಡಿಕೆ) ಮತ್ತು ಪ್ರವಾದಿಗಳ ಜಮಾಅತ್‌ನ ಕೆಲಸ, ಅವರು ಸಹನೆ ಮತ್ತು ದುಆದಿಂದ ಕಾರ್ಯ ನಿರ್ವಹಿಸುತ್ತಾರೆ. ಅದುವೇ ಅಲ್ಲಾಹನ ಆಜ್ಞೆಯಾಗಿದೆ, ರಸೂಲುಲ್ಲಾಹ್ (ಸ) ರವರ ಆಜ್ಞೆಯಾಗಿದೆ. ಹಝ್ರತ್ ಮಸೀಹ್ ಮೌಊದ್(ಅ) ನಮಗೆ ಅದೇ ಶಿಕ್ಷಣವನ್ನು ನೀಡಿದ್ದಾರೆ.

ಈ ಮಾತು ಯಾವಾಗಲೂ ನೆನಪಿಡಬೇಕಾಗಿದೆ. ಜಮಾಅತ್ ಉನ್ನತಮಟ್ಟದ ಹಿತವನ್ನು ದೃಷ್ಟಿಯಲ್ಲಿಟ್ಟುಕೊಂಡು, ತಾತ್ಕಾಲಿಕ ಮತ್ತು ಸಣ್ಣಮಟ್ಟ ಕಷ್ಟಗಳನ್ನು ಸಹನೆವಹಿಸಿ ಸಹಿಸಿಕೊಳ್ಳಬೇಕಾಗಿದೆ.

ನಾನು ನಿಮಗೆ ಸತ್ಯವಾಗಿ ಹೇಳುತ್ತೇನೆ. ಸಹನೆಯನ್ನೂ ಕೈಬಿಡಬೇಡಿರಿ. ಸಹನೆಯಿಂದ ಆಗುವಂತಹ ಕೆಲಸ ತೋಪುಗಳಿಂದಲೂ ಆಗಲು ಸಾಧ್ಯವಿಲ್ಲ. ಏಕೆಂದರೆ ಸಹನೆಯು ಅಂತಹದೊಂದು ಪ್ರಬಲ ಅಸ್ತ್ರವಾಗಿದೆ. ಸಹನೆಯಿಂದಲೇ ನಾವು ಹೃದಯಗಳನ್ನು ಗೆಲ್ಲಬಹುದು. (ಹಝ್ರತ್ ಮಸೀಹ್ ಮೌಊದ್[ಅ]).

**ಹಝ್ರತ್ ಮಸೀಹ್ ಮೌಊದ್[ಅ] ರವರ ಆಧ್ಯಾಪನೆಗಳ ಬೆಳಕಿನಲ್ಲಿ ಕಷ್ಟಗಳ ಮತ್ತು ಆಪತ್ತುಗಳ ಸ್ಥಿತಿಯಲ್ಲಿ ಸಹನೆವಹಿಸಲು ಮಾಡಿದ ಉಪದೇಶಗಳು.**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಟಿಲ್‌ಫೋರ್ಡ್, ಯು.ಕೆ, ಇಸ್ಲಾಮಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **28-04-2023** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

إِيَّاكَ نَعْبُدُ وَإِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಪಾಕಿಸ್ತಾನದಲ್ಲಿ ಅಥವಾ ಬೇರೆ ಜಾಗದಲ್ಲಿ ಜಮಾಅತಿನ ಮೇಲೆ ನಡೆಯುತ್ತಿರುವ ಅವಸ್ಥೆಗೆ ಸಂಬಂದಿಸಿ ಸಹನೆ ತೋರಿಸುವುದಕ್ಕೆ ಬದಲಾಗಿ ಸ್ವಲ್ಪ ಪ್ರತೀಕಾರ ಮಾಡಬೇಕು ಎಂದು ಹೇಳಿಕೊಂಡು ಶಕ್ತವಾದ ಮರಾವೆಗಳೊಂದಿಗೆ ಕೆಲವರು ನನಗೆ ಪತ್ರಗಳನ್ನು ಬರೆಯುತ್ತಾರೆ. ಕೆಲವು ಸಂದರ್ಭಗಳಲ್ಲಿ ಹಝ್ರತ್ ಮುಸ್ಲಿಹ್ ಮೌಊದ್(ರ) ಪ್ರತಿಕ್ರಿಯೆ ಮಾಡಲು ಅನುಮತಿ ನೀಡಿದ್ದರು ಎಂಬ ಉದಾಹರಣೆಗಳನ್ನು ಸಹ ಅವರು ನೀಡುತ್ತಾರೆ. ಹಝ್ರತ್ ಮುಸ್ಲಿಹ್ ಮೌಊದ್(ರ) ರಿಗೆ ಸಂಭಂಧಿಸಿ ಹೇಳುತ್ತಿರುವ ಈ ಮಾತುಗಳು ಪೂರ್ಣವಾಗಿಯೂ ತಪ್ಪಾದ ಸಂಗತಿಗಳಾಗಿವೆ. ಅವರು ಕಾನೂನಿನ ಮಿತಿಯಲ್ಲಿ ಇದ್ದುಕೊಂಡು ಕೆಲವು ಸಂಗತಿಗಳನ್ನು ಮಾಡಿದ್ದರು. ಆದರೆ ಏನೂ ಯೋಚಿಸದೇ ಚಿಂತಿಸದೇ ದಂಗೆಕಾರರ ರೀತಿಯಲ್ಲಿ ಮೆರವಣಿಗೆ ನಡೆಸಲು ಅನುಮತಿ ನೀಡಿರಲಿಲ್ಲ. ಎಲ್ಲಿಯಾದರೂ ಏನಾದರೂ ಪ್ರತಿಭಟನೆಯು ಯಾವುದಾದರೂ ರೀತಿಯಲ್ಲಿ ಆಗಿದ್ದರೆ ಅದು ಖಲೀಫತುಲ್ ಮಸೀಹರ ಅನುಮತಿಯಿಂದ ಆಗಿತ್ತು. ಅಲ್ಲದೇ ಜನರನ್ನು ಒಟ್ಟು ಸೇರಿಸಿ ಪ್ರತಿಭಟನೆ ಆರಂಭಿಸುವ ರೀತಿಯಲ್ಲಿ ಆಗಿರಲಿಲ್ಲ. ಭಾರತ ವಿಭಜನೆಗೆ ಮುಂಚೆ ಆಂಗ್ಲರ ಆಡಳಿತವಿದ್ದಾಗ, ಹಝ್ರತ್ ಮುಸ್ಲಿಹ್ ಮೌಊದ್(ರ) ಭಾಷಣಗಳನ್ನು ಕೆರಳಿಸುವಂತಹದು ಎಂದು ಹೇಳಿಕೊಂಡು ನಮ್ಮ ವಿರೋಧಿಗಳಾದ ಅಧಿಕಾರಿಗಳು ಅವರ ಮೇಲೆ ಕೈ ಮಾಡಲು ಪ್ರಯತ್ನಿಸುತ್ತಿದ್ದರು. ಆದರೆ ಪ್ರತಿಬಾರಿ ಅವರು ಪರಾಜಿತರಾಗುತ್ತಿದ್ದರು. ಏಕೆಂದರೆ ವಿರೋಧಿಗಳ ಮತ್ತು ಆಡಳಿತದ ಅಧಿಕಾರಿಗಳ ನೈಜ ಮುಖವನ್ನು ಹಝ್ರತ್ ಮುಸ್ಲಿಹ್ ಮೌಊದ್(ರ) ಬಹಿರಂಗಗೊಳಿಸುತ್ತಿದ್ದರು.

ಪ್ರವಾದಿಗಳ ಜಮಾಅತ್‌ಗಳ ಕೆಲಸ ಸಹನೆದೋರುವುದು ಮತ್ತು ಕಾನೂನನ್ನು ಪಾಲಿಸುವುದಾಗಿದೆ ಎಂದು ಯಾವಾಗಲೂ ಜಮಾಅತನ್ನು ಉಪದೇಶಿಸುತ್ತಿದ್ದರು. ವಿರೋಧಿ ಅಧಿಕಾರಿಗಳ ಎಲ್ಲ ಕುತಂತ್ರ ಪ್ರಯತ್ನಗಳು ಯಾವಾಗಲೂ ನೀರುಪಾಲಾಗುತ್ತಿದ್ದವು. ಇಸ್ಲಾಮ್ ಮತ್ತು ಹಝ್ರತ್ ಮಸೀಹ್ ಮೌಊದ್(ಅ) ಹೇಳಿರಲು ಹೇಗೆ ಸಾಧ್ಯ?

ಅನೇಕ ಬಾರಿ ಸಹನೆ ಮತ್ತು ದುಆ ಮಾಡಲು ಉಪದೇಶಿಸುತ್ತಾ ಹಝ್ರತ್ ಮಸೀಹ್ ಮೌಊದ್(ಅ) ಹೀಗೆ ಹೇಳಿದರು. ದುರ್ಬಲ ಕಾಲುಗಳು ಹೊಂದಿರುವವರು ಮತ್ತು ಮುಳ್ಳಿನ ಮಾರ್ಗಗಳಲ್ಲಿ ನಡೆಯಲು ಸಾಧ್ಯವಿಲ್ಲದವರು ನಿಸ್ಸಂದೇಹವಾಗಿಯೂ ನನ್ನನ್ನು ಬಿಟ್ಟು ಹೋಗಬಹುದಾಗಿದೆ. (ಅನ್ವಾರುಲ್ ಇಸ್ಲಾಂ, ರೂಹಾನಿ ಖಝಾಈನ್, ಸಂಪುಟ-9, ಪುಟ-23-24)

ಒಟ್ಟಿನಲ್ಲಿ ಲೋಕದ ಮುಂದೆ ಈ ಜಮಾಅತಿನ ವೈಶಿಷ್ಟ್ಯ ಈ ಸಹನೆಯೇ ಆಗಿದೆ.

ಅನೇಕ ಮಾಧ್ಯಮದವರಿಗೂ ನಾನು ಹೆಚ್ಚಾಗಿ ನೀಡುವ ಉತ್ತರವೇನೆಂದರೆ, ನಮಗೆ ತೊಂದರೆಯನ್ನು ನೀಡುತ್ತಿರುವ ದೌರ್ಜನ್ಯ ಮಾಡುತ್ತಿರುವ ಜನರೇ ನಂತರ ಅಹ್ಮದಿ ಕೂಡ ಆಗಿರುವರು ಮತ್ತು ಇನ್ನಷ್ಟು ಜನರು ಆಗುತ್ತಿದ್ದಾರೆ. ನಮ್ಮ ಪ್ರಭಾವವು ಅವರಂತೆಯೇ ಆಗಿತ್ತು. ನಾವೂ ಕೂಡ ಅಂತಹ ಪ್ರತಿಕ್ರಿಯೆ ತೋರಿಸಬಹುದಾಗಿದೆ. ಆದರೆ ನಾವು ಕಾಲಘಟ್ಟದ ಇಮಾಮರನ್ನು ನಂಬಿದ್ದೇವೆ. ನೀವು ಶಾಂತಿಯಿಂದ ಕೆಲಸ ಮಾಡಬೇಕಾಗಿದೆ. ಆದರೆ ಕಾನೂನಿನ ಮಿತಿಯಲ್ಲಿದ್ದುಕೊಂಡು ತಮ್ಮ ಹಕ್ಕುಗಳನ್ನು ಪಡೆಯಲು ಪ್ರಯತ್ನಿಸಬೇಕು ಎಂಬ ಪಾಠವನ್ನೂ ಶಾಂತಿ ಸ್ಥಾಪನೆಗಾಗಿ ಮತ್ತು ಅಲ್ಲಾಹನ ಅನುಗ್ರಹಗಳ ವಾರಸುದಾರರಾಗಲು ನೀಡಿರುವರು. ಆದ್ದರಿಂದ ತಿಳಿದಿರಬೇಕಾದ ಸಂಗತಿಯೇನೆಂದರೆ, ಇದು ಪ್ರವಾದಿಗಳ ಚರಿತ್ರೆಯಾಗಿದೆ, ನಾವು ಸಹನೆದೋರಬೇಕು ಎಂದೇ ಹಝ್ರತ್ ಮಸೀಹ್ ಮೌಊದ್(ಅ) ನಮಗೆ ಕಲಿಸಿಕೊಟ್ಟಿರುವರು. ಹೇಗಿದ್ದರೂ ಈ ಉತ್ತರದಿಂದ ಜನರು ಅಚ್ಚರಿಪಡುತ್ತಾರೆ. ಶಾಂತಿಯಿಂದ ಇರುವವರ ಯಥಾರ್ಥ ಪ್ರತೀಕಾರ ಇದಾಗಿದೆ ಎಂಬುವುದಾಗಿ ಪ್ರಶಂಸೆಯ ಮಾತುಗಳನ್ನೂ ಹೇಳುತ್ತಾರೆ.

ಸಹನೆಯನ್ನು ಒಂದು ಅತ್ಯಂತ ಮುಖ್ಯ ಸಂಗತಿಯೆಂದು ಹಝುರತ್ ಮುಸ್ಲಿಹ್ ಮೌಊದ್(ರ) ಹೇಳಿರುವರು. ಅವರು ಹೀಗೆ ಹೇಳಿರುವರು. ಇದು ಪ್ರವಾದಿಗಳ ಜಮಾಅತ್‌ಗಳ ಅತಿ ಪ್ರಧಾನ ಮತ್ತು ಪ್ರಮುಖ ಕರ್ತವ್ಯಗಳಲ್ಲಿ ಒಂದಾಗಿದೆ. ಇದಲ್ಲದೇ ಯಾವುದೇ ಜಮಾಅತ್ ಪ್ರಗತಿ ಹೊಂದಲು ಸಾಧ್ಯವಿಲ್ಲ ಮತ್ತು ಲೋಕವನ್ನು ತನ್ನನ್ನು ಹಿಂಬಾಲಿಸುವಂತೆ ಸಾಧ್ಯವಿಲ್ಲ. ಈ ಕಡ್ಡಾಯ ಕರ್ತವ್ಯವನ್ನು ಮಾಡದೇ ಯಶಸ್ಸಿನ ಮುಖವನ್ನು ನೋಡಿದ ಯಾವುದೇ ಜಮಾಅತ್ ದಾಟಿ ಹೋಗಿಲ್ಲ.

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ. ಸಹನೆ ಎರಡು ವಿಧದಲ್ಲಿದೆ. ಒಂದು ವ್ಯಕ್ತಿಯೊಬ್ಬನಿಗೆ ಪ್ರತೀಕಾರ ಮಾಡಲು ಶಕ್ತಿಯಿದ್ದೂ ಸಹನೆದೋರುವುದಾಗಿದೆ. ಎರಡನೆಯದು ಎದುರಿಸಲು ಶಕ್ತಿಯೇ ಇಲ್ಲದಿರುವಾಗ ಸಹನೆದೋರುವುದಾಗಿದೆ. ಇದು ಯಾವುದೇ ನಿರ್ವಾಹ ಇಲ್ಲದಿರುವಾಗ ತೋರಿಸುವ ಸಹನೆಯಾಗಿದೆ.

ಶಕ್ತಿಯಿದ್ದು ತೋರಿಸುವ ಸಹನೆ ಎಂದರೆ, ದೌರ್ಜನ್ಯ ಮಾಡುವವರ ವಿರುದ್ಧ ಪ್ರತೀಕಾರ ಮಾಡದೇ ಇರುವುದು ಮತ್ತು ಅಲ್ಲಾಹನಿಗಾಗಿ ಸಹನೆದೋರುವುದಾಗಿದೆ. ಒತ್ತಡಕ್ಕೆ ಒಳಪಟ್ಟು ಮಾಡುವ ಸಹನೆ ಎಂದರೆ, ಶಕ್ತಿಯಿಲ್ಲದ ಕಾರಣದಿಂದ ಅಗಸೀಯ ಆಪತ್ತುಗಳು ಬರುವಾಗ ಅಲ್ಲಾಹನ ಸಂಪ್ರೀತಿಗಾಗಿ ಸಹನೆದೋರುವುದಾಗಿದೆ. ಅಲ್ಲಾಹನು ವಿವಿಧೆಡೆ ಸಹನೆದೋರಲು ಉಪದೇಶ ನೀಡಿದ್ದಾನೆ. ಅಲ್ಲಾಹನ ಆದೇಶಗಳನ್ನು ಮುಂದಿರಿಸಿ ನೋಡುವುದಾದರೆ, ಸಹನೆಯ ಮೂರು ಅರ್ಥಗಳಿವೆ.

ಮೊದಲನೆಯದಾಗಿ, ಪಾಪದಿಂದ ರಕ್ಷಣೆ ಪಡೆಯುವುದು ಮತ್ತು ತನ್ನ ಆತ್ಮವನ್ನು ಅದರಿಂದ ತಡೆಯುವುದು. ಎರಡನೆಯದಾಗಿ ಸತ್ಕರ್ಮಗಳಲ್ಲಿ ಸ್ಥಿರಚಿತ್ತತೆಯಿಂದ ನೆಲೆನಿಲ್ಲುವುದು, ಮೂರನೆಯದಾಗಿ ಗೋಳಾಡುವುದು ಮತ್ತು ರೋಧಿಸುವುದರಿಂದ ಬಿಟ್ಟು ನಿಲ್ಲುವುದು ಮೊದಲ ಅರ್ಥದ ಪ್ರಕಾರ ನಿರಂತರವಾಗಿ ಮತ್ತು ಸ್ಥಿರಚಿತ್ತತೆಯಿಂದ ತನ್ನೆಡೆಗೆ ಸೆಳೆಯುತ್ತಿರುವ ಕೆಡುಕುಗಳಿಂದ ತಡೆದು ನಿಲ್ಲಬೇಕಾಗಿದೆ ಮತ್ತು ಇನ್ನುಮುಂದೆ ತನ್ನೆಡೆಗೆ ಸೆಳೆಯಬಹುದಾದ ಪಾಪಗಳಿಂದ ರಕ್ಷಣೆ ಪಡೆಯಲು ತಯಾರಾಗಿ ನಿಲ್ಲಬೇಕಾಗಿದೆ.

ಎರಡನೆ ಅರ್ಥದ ಪ್ರಕಾರ ಮನುಷ್ಯನು ಗಳಿಸಿರುವ ಒಳಿತುಗಳಲ್ಲಿ ಸ್ಥಿರವಾಗಿ ನಿಲ್ಲಬೇಕಾಗಿದೆ ಮತ್ತು ಆತನಿಗೆ ಇಲ್ಲಿಯವರೆಗೂ ಲಭಿಸಿದ ಒಳಿತುಗಳನ್ನು ಗಳಿಸಲು ಪ್ರಯತ್ನಿಸಬೇಕಾಗಿದೆ. ಇದು ಸಹ ಮನುಷ್ಯನಿಗೆ ಅಲ್ಲಾಹನ ಸಾಮಿಪ್ಯ ನೀಡುವ ಸಹನೆಯ ಒಂದು ವಿಧವಾಗಿದೆ. ಈ ಸಾಮಿಪ್ಯ ದುಆಗಳಿಂದಲೇ ಲಭಿಸಲು ಸಾಧ್ಯ. ಈ ಕುರಿತು ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೇಳಿದನು. **ವಸ್ತಈನು ಬಿಸ್ಸಬರಿ ವಸ್ಸಲಾತಿ ವ ಇನ್ನಹಾ ಲಕಬೀರತುನ್ ಇಲ್ಲಾ ಅಲಲ್‌ಖಾಶಿಈನ್** (ಅಲ್‌ಬಖರ-96) ಅರ್ಥ. ಅವರು ತಮ್ಮ ಪ್ರಭುವಿನ ಪ್ರೀತಿಯನ್ನು ಆಶಿಸುತ್ತಾ ಸಹನೆದೋರುತ್ತಾರೆ. ನಮಾಝ್‌ನ್ನು ನಿಷ್ಠೆಯಿಂದ ನಿರ್ವಹಿಸುತ್ತಾರೆ. ತಾವು ಅವರಿಗೆ ನೀಡಿದವುಗಳಿಂದ ಗುಪ್ತವಾಗಿಯೂ ಬಹಿರಂಗವಾಗಿಯೂ ವ್ಯಯಿಸುತ್ತಾರೆ. ಕೆಡುಕನ್ನು ಒಳಿತಿನ ಮೂಲಕ ತಡೆಯುತ್ತಾರೆ. ಅಂತಹ ಜನರಿಗೆ ಆ (ಪಾರತ್ರಿಕ) ಗೃಹದ ಅತ್ಯುತ್ತಮ ಪುರಸ್ಕಾರವಿದೆ.

ಇನ್ನೊಂದೆಡೆ ಅಲ್ಲಾಹನು ಹೀಗೆ ಹೇಳಿದನು. **ವಲ್ಲಝೀನ ಸಬರೂಬ್‌ತಿಘಾಅ ವಜ್‌ಹಿ ರಬ್ಬಿಹಿಮ್ ವ ಅಖಾಮೂ ಸ್ಸಲಾತ ವ ಅನ್‌ಫಿಖೂ ಮಿಮ್ಮಾ ರಝಖ್‌ನಾಹುಮ್ ಸಿರ್‍ರುವ್ವ ಅಲಾ ನೀಯತವ್ವ ಯದ್‌ರೂನ ಬಿಲ್‌ಹಸನತಿಸ್ಸೈಯಿಅತ ಉಲಾಯಿಕ ಲಹುಮ್ ಉಖುಬದ್ದಾರಿ** (ಅರ್‍ರಾದ್:23) ಅಂದರೆ: ಅವರು ತಮ್ಮ ಪ್ರಭುವಿನ ಪ್ರೀತಿಯನ್ನು ಆಶಿಸುತ್ತಾ ಸಹನೆದೋರುತ್ತಾರೆ; ನಮಾಝುನ್ನು ನಿಷ್ಠೆಯಿಂದ ನಿರ್ವಹಿಸುತ್ತಾರೆ; ನಾವು ಅವರಿಗೆ ನೀಡಿದವುಗಳಿಂದ ಗುಪ್ತವಾಗಿಯೂ ಬಹಿರಂಗವಾಗಿಯೂ ವ್ಯಯಿಸುತ್ತಾರೆ; ಕೆಡುಕನ್ನು ಒಳಿತಿನ ಮೂಲಕ ತಡೆಯುತ್ತಾರೆ. ಅಂತಹ ಜನರಿಗೆ ಆ (ಪಾರತ್ರಿಕ) ಗೃಹದ ಅತ್ಯುತ್ತಮ ಪುರಸ್ಕಾರವಿದೆ.

ಒಟ್ಟಿನಲ್ಲಿ ಸಹನೆ ಎಂಬುವುದು ಸ್ಥಿರಚಿತ್ತತೆ, ವಿನಯವಂತಿಕೆ ಮತ್ತು ಪ್ರಾರ್ಥನೆಗಳ ಮೂಲಕ ಅಲ್ಲಾಹನ ಸಂಪ್ರೀತಿಯನ್ನು ಗಳಿಸುವುದರ ಹೆಸರಾಗಿದೆ. ನಾವು ನಮ್ಮ ಸ್ಥಿತಿಗತಿಗಳನ್ನು ಅಲ್ಲಾಹನ ಅಧ್ಯಾಪನೆಗಳ ಪ್ರಕಾರ ಮಾಡುವಾಗ, ನಮ್ಮ ಜೀವನವನ್ನು ಸಾಗಿಸುವಾಗ ಮತ್ತು ಅಲ್ಲಾಹನ ಸಂಪ್ರೀತಿಯನ್ನು ಗಳಿಸುವುದು ನಮ್ಮ ಗುರಿಯಾಗುವಾಗ ಅದು ಸಾಧ್ಯವಾಗುವುದು.

ಈ ಮನೆ, ಈ ಲೋಕ ತಾತ್ಕಾಲಿಕವಾಗಿವೆ. ಇಲ್ಲಿ ಪರೀಕ್ಷೆಗಳಿವೆ. ಕೊನೆಯದಾಗಿ ಅಲ್ಲಾಹನ ಸಂಪ್ರೀತಿಗಾಗಿ ಸಹನೆ ವಹಿಸುವರೇ ಪರಲೋಕದಲ್ಲಿ ಸ್ವರ್ಗ ಪಡೆಯುವರು.

ಆದ್ದರಿಂದ ಸಹನೆ ಸ್ಥಿರಚಿತ್ತತೆ, ವಿನಯವಂತಿಕೆ ಮತ್ತು ಅಲ್ಲಾಹನ ಸಂಪ್ರೀತಿಯನ್ನು ಗಳಿಸುವುದರ ಹೆಸರಾಗಿದೆ. ಎಂತಹದೇ ಕಷ್ಟಗಳು ಬರಲಿ, ಸಂಪತ್ತಿನ ನಷ್ಟವಾಗಲಿ ಅಪಸ್ವರತೆಗೆಗೆ ಬಾರದು. ಇದು ಅಲ್ಲಾಹನ ಮುಂದೆ ಅಸಹಿಷ್ಣುತೆ ತೋರಿದಂತಾಗುವುದು.

ಅಲ್ಲಾಹನ ಮೇಲೆ ದೂರು ಸಲ್ಲಿಸುವುದು ತಪ್ಪಾಗಿದೆ. ನಮ್ಮಲ್ಲಿ ಏನಿಲ್ಲವಿದೆ. ಅದು ಅಲ್ಲಾಹನಿಂದ ಬಂದುದಾಗಿದೆ. ಯಾವಾಗಲೂ ಇಂತಹ ಭಾವನೆ ಹೊಂದಿರಬೇಕು. ಇಂದು ಅಲ್ಲಾಹನು ಪಡೆಯುವವನಾದರೆ, ನಾಳೆ ಇನ್ನಷ್ಟು ಕೊಡುವವನು ಅವನೇ ಆಗಿದ್ದಾನೆ. ಇಂತಹ ಯೋಚನೆಯುಳ್ಳವರು ಯಥಾರ್ಥ ಸತ್ಯವಿಶ್ವಾಸಿಗಳಾಗಿದ್ದಾರೆ. ಅಲ್ಲಾಹನ ದೃಷ್ಟಿಯಲ್ಲಿ ಇಂತಹವರೇ ಯಥಾರ್ಥ ಸಹನೆಯುಳ್ಳವರಾಗಿದ್ದಾರೆ.

ಅಂದಹಾಗೆ ಸಹನೆಗೆ ಈ ಮೂರು ಅರ್ಥಗಳಿವೆ. ಆದರೆ ಸದಾ ಇದನ್ನು ನೆನಪಿಡಬೇಕು, ಸಹನೆ ಯಾವುದೇ ದುರ್ಬಲತೆಯಿಂದ ಆಗಿರಬಾರದು, ಯಾವುದೇ ಲೌಕಿಕ ವಿಷಯದ ಕಾರಣದಿಂದ ಆಗಿರಬಾರದು, ಬದಲು ಕೇವಲ ಮತ್ತು ಕೇವಲ ಅಲ್ಲಾಹನ ಸಂಪ್ರೀತಿಯ ಉದ್ದೇಶ ಹೊಂದಿರಬೇಕು. ಇದಾಗಿದೆ ಯಥಾರ್ಥ ರೀತಿಯ ಸಹನೆ. ಅದು ಅಲ್ಲಾಹನ ಅನುಗ್ರಹಗಳು ತನ್ನೆಡೆ ಸೆಳೆಯುತ್ತದೆ. ಯಾವನೇ ಒಬ್ಬ ವ್ಯಕ್ತಿ ಅಧಿಕಾರಿಗಳ ಮುಂದೆ ಆತೌಅ ಬಾದಶಾಹನ ಮುಂದೆ, ಅವನ ದೌರ್ಜನ್ಯದಿಂದ ಮೌನವಹಿಸಿದರೆ, ಅಲ್ಲಾಹನ ಆದೇಶದ ಮೇರೆಗೆ ಸಹನೆದೋರಿದರೆ, ಇದು ಯಥಾರ್ಥ ಸಹನೆಯಾಗಿದೆ, ಅದರ ಬದಲು ತಮ್ಮ ಜೀವಭಯದಿಂದ ಮೌನವಹಿಸುದು ತಪ್ಪಾಗಿದೆ.

ನಾವು ಸಹನೆಯ ಉಪದೇಶ ನೀಡುವುದಾದರೆ ಅದು ಕೇವಲ ಅಲ್ಲಾಹನ ಆದೇಶ ಪಾಲನೆಗಾಗಿಯಾಗಿದೆ.

ಹಾಗೆ ಸೇಡು ತೀರಿಸಿಕೊಳ್ಳಬೇಕಾದರೆ ಎಷ್ಟೋ ಅಹ್ಮದಿಗಳು ತಮ್ಮ ಜೀವಗಳ ಹಂಗು ತೊರೆದು ಉತ್ಸಾಹದಲ್ಲಿದ್ದಾರೆ, ನಾವು ಸೇಡು ತೀರಿಸಿಕೊಂಡು ದಂಗೆಕೋರರಿಗೆ ರುಚಿ ತೋರಿಸಬಹುದು. ಆದರೆ ನಾವು ಅದನ್ನು ಮಾಡಲಾರೆವು. ಇದು ನಮಗೆ ನೀಡಿದ ಶಿಕ್ಷಣಕ್ಕೆ ವಿರುದ್ಧವಾಗಿದೆ, ನಾವು ಇಂತಹ ಹೇಯ ಕೃತ್ಯ ಮಾಡಲಾರೆವು. ಏಕೆಂದರೆ ಅದು ಪ್ರವಾದಿಗಳ ಆಚಾರವಲ್ಲ ಮತ್ತು ನಾವು ಬೈಅತ್ತಿನಲ್ಲಿ ಮಾನವಕುಲಕ್ಕೆ ಎಲ್ಲ ರೀತಿಯ ಹಿಂಸೆಯಿಂದ ರಕ್ಷಿಸುವೆವು ಎಂದು ಪ್ರತಿಜ್ಞೆ ಮಾಡಿರುತ್ತೇವೆ. ಹಝ್ರತ್ ಮಸೀಹ್ ಮೌಊದ್(ಅ) ನಮಗೆ ಬಲವಾಗಿ ಅದರಿಂದ ತಡೆಯುತ್ತಾರೆ.

ಹಝ್ರತ್ ಮುಸ್ಲಿಹ್ ಮೌಊದ್(ರ) ಸಹನೆ ಕುರಿತು ವಿಶ್ಲೇಷಣೆ ನೀಡುತ್ತಾ ಹೇಳುತ್ತಾರೆ, ನೆನಪಿಡಿರಿ, ನಿಮ್ಮ ನಡತೆಯಿಂದ ಸಹನೆ ಮತ್ತು ನಿರ್ಲಜ್ಜತೆಯಲ್ಲಿ ಸ್ಪಷ್ಟ ವ್ಯತ್ಯಾಸ ಬಹಿರಂಗವಾಗಬೇಕಾಗಿದೆ. ಉದಾಹರಣೆಗೆ

ವ್ಯಕ್ತಿಯೊಬ್ಬನು ತನ್ನ ಅವಶ್ಯಕತೆಗೋಸ್ಕರ ಒಬ್ಬ ವ್ಯಕ್ತಿಯಿಂದ ಸಾಲ ಕೇಳಿದರೆ, ಆ ವ್ಯಕ್ತಿ ಅವನಿಗೆ ಏನೆಲ್ಲ ಮಾತುಗಳನ್ನು ಆಡಿದರ, ಅವರನ್ನು ಅವಹೇಳನಕ್ಕೆ ಗುರಿಮಾಡಿದರೆ, ಆಗಲೂ ಬೇಡುವವನು ನಗು ನಗುತ್ತಾ ಅವನ ಮಾತಿಗೆ ಲೆಕ್ಕಿಸದೆ, ತನ್ನ ಅವಶ್ಯಕತೆಗೋಸ್ಕರ ಅವಮಾನವನ್ನು ಸಹಿಸಿಕೊಂಡರೆ ಅದು ನಿರ್ಲಜ್ಜತೆಯಾಗಿದೆ ಹೊರತು ನಿಜವದ ಸಹನೆ ಅಲ್ಲ, ಆದರೆ ಕೆಲವೊಮ್ಮೆ ಸಮುದಾಯಕ್ಕೋಸ್ಕರ ಮತ್ತು ಧಮನಕ್ಕೋಸ್ಕರ ಸಹನೆ ವಹಿಸಬೇಕಾಗುತ್ತದೆ, ಮೌನವಹಿಸಬೇಕಾಗುತ್ತದೆ. ಈ ಸಹನೆ ವ್ಯಕ್ತಿಗತ ಕಾರಣಕ್ಕೆ ಇರುವುದಿಲ್ಲ. ಆದ್ದರಿಂದ ಇದು ಯಥಾರ್ಥ ಸಹನೆಯಾಗಿ ಹೊರತು ನಿರ್ಲಜ್ಜತೆ ಅಲ್ಲ, ಉದಾಹರಣೆಗೆ ಪ್ರತೀಕಾರ ಮಾಡುವುದರಿಂದ ಅವನ ಸಮುದಾಯದ ಮೇಲೆ ಆಪತ್ತು ಒದಗಿ ಬಂದರೆ, ಸಹನೆದೋರಲಿಲ್ಲ ಎಂದಾದರೆ ಅವನನ್ನು ಮೂಢ ಎನ್ನಬಹುದು. ಏಕೆಂದರೆ ಈ ರೀತಿ ಅವನು ತನ್ನ ಸಮುದಾಯಕ್ಕೆ ಹಾನಿಯನ್ನುಂಟು ಮಾಡುವವನಾಗುತ್ತಾನೆ. ಆದ್ದರಿಂದ ಒಬ್ಬನು ಸಮುದಾಯದ ಹಿತದೃಷ್ಟಿಯಿಂದ ಪ್ರತೀಕಾರ ಮಾಡಲಿಲ್ಲ ಎಂದಾದರೆ ಅಥವಾ ಲೋಕವನ್ನು ನಷ್ಟದಿಂದ ರಕ್ಷಿಸಲು ಸಹನೆವಹಿಸಿದರೆ, ಅದು ಅವನ ಸಹನೆ ನಿಜವಾದ ಸಹನೆಯಾಗುತ್ತದೆ.

ಆದ್ದರಿಂದ ನಮಗೆ ನೆನಪಿಡಬೇಕಾಗಿದೆ, ಕೆಲ ಜನರು ಪೋಲೀಸರು ವ್ಯಕ್ತಿಯೊಬ್ಬನಿಗೆ ಬಂಧಿಸಿದರೆ ತುಂಬಾ ಆವೇಶಭರಿತರಾಗುತ್ತಾರೆ. ಜನರನ್ನು ಒಟ್ಟುಗೂಡಿಸಿ ಮೆರವಣಿಗೆ ತಡೆಯುತ್ತಾರೆ. ಇದೆಲ್ಲ ತಪ್ಪಾಗಿದೆ. ನಮ್ಮ ಪ್ರತಿಕ್ರಿಯೆ ತೋರಿಸಿದರೆ ಇನ್ನಷ್ಟು ಕಾಠಿಣ್ಯ ತೋರಿಸಲು ಮತ್ತು ನಮ್ಮ ಜಮಾಅತಿನ ಮೇಲೆ ನಿರ್ಬಂಧಗಳನ್ನು ಹೇರುವ ಪ್ರಯತ್ನವನ್ನು ಮಾಡಲು ಎದುರಾಳಿಗಳು ಬಯಸುತ್ತಾರೆ. ಈಗ ಕೆಲವು ಆಡಳಿತಾಧಿಕಾರಿಗಳು ವಿರೋಧಿಗಳಗೆ ಬೆಂಬಲ ನೀಡುತ್ತಿದ್ದಾರೆ. ಆದ್ದರಿಂದ ಪ್ರತೀಕಾರದಿಂದ ಸ್ಥಿತಿಗತಿಗಳು ಹಾಳಾಗುವುವು. ಇಂತಹ ಕೃತ್ಯಗಳ ಕಾರಣದಿಂದ ಜಮಾಅತಿಗೆ ನಷ್ಟವುಂಟಾದ ಘಟನೆಗಳು ಜಮಾಅತಿನ ಚರಿತ್ರೆಯಲ್ಲಿ ಇವೆ. ಆದರೆ ಸಹನೆಯೊಂದಿಗೆ ಅವಸ್ಥೆಗಳನ್ನು ಉತ್ತಮಗೊಳಿಸಲು ಪ್ರಯತ್ನಿಸಿದಾಗ ಅದರ ಪ್ರಯೋಜನವು ಉಂಟಾಯಿತು. ಈ ರೀತಿಯಾಗಿ ಕೆಲವು ಅಧಿಕಾರಿಗಳ ಮೇಲೆ ಧನಾತ್ಮಕ ಪ್ರಭಾವ ಸಹ ಉಂಟಾಯಿತು.

ಒಟ್ಟಿನಲ್ಲಿ ಈ ಸಂದೇಶ ನಾವು ಕೊಡಬಯಸುತ್ತೇವೆ. ನಾವು ಸಹ ಅದೇ ಸಮುದಾಯದವರಾಗಿದ್ದೇವೆ. ನಮ್ಮಿಂದಲೂ ತಪ್ಪು ಪ್ರತಿಕ್ರಿಯೆ ಬರಬಹುದು ಅಥವಾ ನಿಮ್ಮ ಪೈಕಿ ವ್ಯಕ್ತಿಯೊಬ್ಬನು ತಪ್ಪು ಮಾಡಬಹುದು. ಆದರೆ ನಾವು ಮಾಡಲಾರೆವು. ಇದು ಇಸ್ಲಾಮಿನ ಶಿಕ್ಷಣಕ್ಕೆ ವಿರುದ್ಧವಾಗಿದೆ. ನಿಧಾನವಾಗಿ ಅಧಿಕಾರಿಗಳ ಮೇಲೆ ಅದರ ಸಕರಾತ್ಮಕ ಪರಿಣಾಮವಾಗುತ್ತದೆ. ಕೆಲವು ಇಂತಹ ಘಟನೆಗಳು ನಮ್ಮ ಅನುಭವಕ್ಕೆ ಬೀರಿವೆ. ನಿಮ್ಮ ಆಕ್ರಮಣಕಾರಿ ಪ್ರತಿಕ್ರಿಯೆಯಿಂದ ನಾವು ತಬ್ಲೀಗ್ಹ್ ಮಾಡುತ್ತಿರುವ ವ್ಯಕ್ತಿಗಳ ಮೇಲೂ ಕೆಟ್ಟ ಪ್ರಭಾವ ಉಂಟಾಗುವುದು. ನಾವು ಹಝ್ರತ್ ಮಸೀಹ್ ಮೌಊದ್(ಅ) ಅವರ ಜಮಾಅತಿಗೆ ಬರುವಂತಾಗಲು ಅವರು ಉಂಟು ಮಾಡಿದ ಪರಿವರ್ತನೆಯಾದರೂ ಏನು ಎಂದು ಪ್ರಶ್ನಿಸಲು ಅವರಿಗೆ ಅವಕಾಶ ಲಭಿಸುತ್ತದೆ. ಪ್ರವಾದಿಗಳ ಮತ್ತು ಪ್ರವಾದಿಗಳ ಜಮಾಅತುಗಳ ಚರಿತ್ರೆ ಸಹನೆ ಮತ್ತು ದುಆ ಮಾಡುವುದಾಗಿದೆ. ಅಲ್ಲಾಹನ ಮತ್ತು ಅವನ ಪ್ರವಾದಿಯ ಆದೇಶವು ಅದೇ ಆಗಿದೆ ಮತ್ತು ಹಝ್ರತ್ ಮಸೀಹ್ ಮೌಊದ್(ಅ) ರವರು ಸಹ ನಮಗೆ ಅದೇ ಶಿಕ್ಷಣವನ್ನು ನೀಡಿದ್ದಾರೆ. ಆದ್ದರಿಂದ ಒಂದು ಸಂಗತಿಯನ್ನು ನೆನಪಿಡಿರಿ, ಜಮಾಅತಿನ ದೀರ್ಘಕಾಲೀನ ಲಾಭಕ್ಕಾಗಿ ಕಷ್ಟತೆಗಳನ್ನು ತಾಳ್ಮೆಯೊಂದಿಗೆ ಅನುಭವಿಸಬೇಕು. ಮತ್ತು ಸಹಿಸಬೇಕು.

ಒಟ್ಟಿನಲ್ಲಿ ಹಝ್ರತ್ ಮುಸ್ಲಿಹ್ ಮೌಊದ್(ರ) ಹಝ್ರತ್ ಮಸೀಹ್ ಮೌಊದ್(ಅ) ರ ಈ ಮಾತನ್ನು ಮುಂದಿಟ್ಟು ಹೇಳದಿರು. ಜನರು ಹೇಳಬಹುದು. ಹಝ್ರತ್ ಮಸೀಹ್ ಮೌಊದ್(ಅ) ಅವರು ಸಹ ತನ್ನ ಗ್ರಂಥಗಳಲ್ಲಿ ಕೆಲವು ಕಠಿಣ ಶಬ್ದಗಳನ್ನು ಬಳಸಿದ್ದಾರೆ. ಆದುದರಿಂದ ನಾವು ಸಹ ಮಾಡಬಹುದಾಗಿದೆ. ಹೇಳಿದರು. ಇಂತಹವರು ನೆನಪಿಡಬೇಕು. ಅಲ್ಲಾಹ್ ಮತ್ತು ಅವನ ಪ್ರವಾದಿಗಳ ಘನತೆಯೇ ಬೇರೆ ರೀತಿಯದ್ದಾಗಿರುತ್ತದೆ. ಉದಾಹರಣೆಗೆ ನಾನು ನೋಡುತ್ತಿರುತ್ತೇವೆ. ನ್ಯಾಯಧೀಶನೊಬ್ಬನು ಅಪರಾಧಿಯನ್ನು ಕಳ್ಳ ಎನ್ನುತ್ತಾನೆ. ಇದು ಅವನ ಕಾರ್ಯವಾಗಿದೆ. ಮತ್ತು ಅವನ ಹಕ್ಕಾಗಿದೆ. ಅದೇ ನೆಲೆಯಲ್ಲಿ ಅವನು ಅವನಿಗೆ ಶಿಕ್ಷೆಯನ್ನು ವಿಧಿಸುತ್ತಾನೆ. ಅವನ ಸುಧಾರಣೆಗಾಗಿಯೂ ಪ್ರಯತ್ನಪಡುತ್ತಾರೆ. ಆದರೆ ಇದು ಪ್ರತಿಯೊಬ್ಬರ ಕಾರ್ಯವಾಗಿರುವುದಿಲ್ಲ, ಅವರು ಬೇಕಾದವರನ್ನು ಕಳ್ಳ ಅಥವಾ ಅಪರಾಧಿ ಎಂದರೆ ದಂಗೆ ಹಬ್ಬುವುದು. ಆದ್ದರಿಂದ ಹಝ್ರತ್ ಮಸೀಹ್ ಮೌಊದ್(ಅ) ಜನರ ದೌರ್ಬಲ್ಯಗಳನ್ನು ಎತ್ತಿಹಿಡಿದು ತೋರಿಸುತ್ತಾರೆ. ಅದು ಅವರ ಸುಧಾರಣೆಯು ಉದ್ದೇಶವಾಗಿರುತ್ತದೆ. ಅವರ ತಪ್ಪು ದೃಷ್ಟಿಕೋನಗಳಿಂದ ಜನರಿಗೆ ರಕ್ಷಿಸಲು ಹೀಗೆ ಮಾಡುತ್ತಾರೆ. ಆದರೆ ತನ್ನ ವೈಯಕ್ತಿಕ ವಿಷಯಕ್ಕೆ ಬಂದಾಗ ಅವರು ಸ್ವಯಂ ತನ್ನ ಬಗ್ಗೆ ಹೀಗೆ ಹೇಳಿಕೊಂಡಿರುವರು.

ಗಾಲಿಯಾಂ ಸುನ್ ಕರ್ ದುಆ ದೇತಾಹೂಂ ಉನ್ ಲೋಗೋಂ ಕೋ

ರಹಮ್ ಹೈ ಜೋಶ್‌ಮೇ ಔರ್ ಗೈಜ್ಞ್ ಘಟಾಯ ಹಮ್ ನೇ

(ಬೈಗಳನ್ನು ಕೇಳಿಯೂ, ಅವರಿಗಾಗಿ ದುಆ ಕೊಡುವೆನು, ತನ್ನ ಮನಸ್ಸಿನಲ್ಲಿ ಕರುಣೆಯಿದೆ. ಕೋಪವನ್ನು ದಮನಿಸಿದೆವು ನಾವು)

ಇತರರ ಕಠಿಣ ವರ್ತನೆಯನ್ನು ಸಹನೆಯಿಂದ ವರ್ತಿಸಿರಿ ಎಂಬ ಶಿಕ್ಷಣವೇ ಹಝ್ರತ್ ಮಸೀಹ್ ಮೌಊದ್ (ಅ) ನಮಗೆ ಆಡಿರುವರು.

ಹಝ್ರತ್ ಮುಸ್ಲಿಹ್ ಮೌಊದ್(ರ) ಒಂದು ಉದಾಹರಣೆಯನ್ನು ನೀಡುತ್ತಾ ಹೇಳುತ್ತಾರೆ. ಒಂದು ಸಂದರ್ಭಧಲ್ಲಿ ಹಝ್ರತ್ ಮಸೀಹ್ ಮೌಊದ್ (ಅ) ವಾಹನದಲ್ಲಿ ಕುಳಿತುಕೊಂಡು ಲಾಹೋರಿಗೆ ಹೋಗುತ್ತಿದ್ದರು. ನಗರದ ದುಷ್ಕರ್ಮಿಗಳು ಅವರ ಮೇಲೆ ಕಲ್ಲುಗಳನ್ನು ಎಸೆಯುತ್ತಿದ್ದರು. ಅದು ಅವರ ವಾಹನದ ಮೇಲೆ ಬೀಳುತ್ತಿದ್ದವು. ಅದು ಕುದುರೆಗಾಡಿಯಾಗಿತ್ತು. ಆದರೂ ಹಝ್ರತ್ ಮಸೀಹ್ ಮೌಊದ್(ಅ) ಸ್ವಲ್ಪವು ವಿಚಲಿತರಾಗಲಿಲ್ಲ. ಕಿಟಕಿ ಹೊಡೆದು ಕೆಲವು ಕಲ್ಲುಗಳು ಒಳಗೆ ಬರುತ್ತಿದ್ದವು. ಅವರ ಈ ಸಹನೆ ಕಾರಣದಿಂದಲೇ, ಅದೇ ಜನರಿಂದ ನೂರಾರು ಜನರು ಮಸೀಹ್ ಮೌಊದ್ (ಅ) ರವರ ಸೇವೆಯಲ್ಲಿ ಬಂದು ಸೇರಿದರು. ಆದ್ದರಿಂದ ನಮಗೆ ಈ ನಡತೆ ತೋರಿಸಬೇಕಾಗಿದೆ.

ಯಾರಾದರೂ ವಿರೋಧದಲ್ಲಿ ತನ್ನ ವೈಯಕ್ತಿಕ ಲಾಭಕ್ಕಾಗಿ, ಹೃದಯದಲ್ಲಿ ಕಪಟ ಕ್ರೋಧ ಹೊಂದಿದವನಾದ ಅಲ್ಲಾಹನು ಸ್ವಯಂ ಅವನ ಪ್ರತೀಕಾರ ತೆಗೆದುಕೊಳ್ಳುವೆನು. ಷರತ್ತೇನೆಂದರೆ ಸಹನೆ ಮತ್ತು ದುಆಗಳಿಂದ ಕಾರ್ಯ ವಹಿಸಬೇಕು.

ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವಸಲ್ಲಮ್ ಅವರ ಕಾಲಘಟ್ಟದಲ್ಲಿ ಅನೇಕ ಜನರು ಹಝ್ರತ್ ಪೈಗಂಬರ್(ಸ) ರ ಮತ್ತು ಸಹಾಬಿಯರ ಸಹನೆಯನ್ನು ನೋಡಿಯೇ ಸತ್ಯವಿಶ್ವಾಸವನ್ನು ಕೈಗೊಂಡಿದ್ದರು. ಇಂತಹ ಉದಾಹರಣೆಗಳು ಹಝ್ರತ್ ಮಸೀಹ್ ಮೌಊದ್(ಅ) ಅವರ ಕಾಲದಲ್ಲೂ ಲಭಿಸುತ್ತವೆ. ಹಝ್ರತ್ ಮುಸ್ಲಿಹ್ ಮೌಊದ್(ರ) ಅವರು ಹೇಳಿದಂತೆ ಹಝ್ರತ್ ಮಸೀಹ್ ಮೌಊದ್(ಅ) ಅವರ ಕಾಲದಲ್ಲೂ ಅವರ(ಅ) ಸಹನೆ ಮತ್ತು ಉತ್ತಮ ಸ್ವಭಾವ ಗುಣಗಳನ್ನು ನೋಡಿಕೊಂಡು ಅವರ ಜಮಾಅತಿನಲ್ಲಿ ಸೇರಿದರು. (ಖುತುಬಾತೆ ಮಹ್ಮೂದ್, ಸಂಪುಟ–9, ಪುಟ 130–140)

ಇಂದು ಸಹ ಮತ್ತು ಈಗಲೂ ಸಹ ನಾವು ನೋಡುತ್ತಿದ್ದೇವೆ. ಕೆಲವು ಪತ್ರಗಳು ನನಗೆ ವಿವಿಧ ದೇಶಗಳಿಂದ ಬರುತ್ತಿವೆ. ಬಹಳಷ್ಟು ಜನರು ಜಮಾಅತಿನ ಇದೆ ಚರಿತ್ರೆಯನ್ನು ನೋಡಿ ಜಮಾಅತನ್ನು ಸೇರುತ್ತಿದ್ದಾರೆ.

ಜಮಾಅತನ್ನು ಸಹನೆಯ ಉಪದೇಶ ನೀಡುತ್ತಾ ಒಂದು ಸಂದರ್ಭದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಸಹನೆಯು ಅಮೂಲ್ಯ ವಜ್ರವಾಗಿದೆ. ಯಾವ ವ್ಯಕ್ತಿ ಸಹನೆದೋರುತ್ತಾನೆ. ಕ್ರೋಧದಿಂದ ಮಾತನಾಡುವುದಿಲ್ಲ, ಅವನ ಭಾಷಣ ಅವನದದಾಗಿರುವುದಿಲ್ಲ. ಬದಲು ಅಲ್ಲಾಹನು ಅವನಿಂದ ಭಾಷಣ ಮಾಡಿರುತ್ತಾನೆ. ಜಮಾಅತಿಗೆ ಸಹನೆದೋರಬೇಕಾಗಿದೆ ಮತ್ತು ವಿರೋಧಿಗಳ ಕಠಿಣತೆ ನೋಡಿ ಕಠಿಣತೆಯಿಂದ ವರ್ತಿಸಬಾರದು. ಬೈದರೆ ಪ್ರತಿಯಾಗಿ ಬೈಯಬಾರದು. ನಮ್ಮನ್ನು ತಿರಸ್ಕರಿಸುವವನು ನಮ್ಮೊಡನೆ ಆದರತೆ ತೋರುವುದು ಅನಿವಾರ್ಯವಲ್ಲ. ಹಝುರತ್ ಮಸೀಹ್ ಮೌಊದ್ (ಅ) ರವರ ಹೆಸರು ಆದರತೆಯಿಂದ ಹೇಳುವುದು ಅವಶ್ಯಕವಿಲ್ಲ. ಇದರ ಮಾದರಿಗಳು ಹಝ್ರತ್ ಪೈಗಂಬರ್(ಸ) ರವರ ಜೀವನದಲ್ಲಿ ಬಹಳಷ್ಟು ಕಂಡುಬರುತ್ತವೆ. ಸಹನೆಯಂತೆ ಯಾವುದೂ ವಸ್ತು ಇಲ್ಲ. ಆದರೆ ಸಹನೆದೋರುವುದು ಕಠಿಣತೆ ಕೆಲಸವಾಗಿದೆ. ಸಹನೆದೋರುವವನ ಜೊತೆ ಅಲ್ಲಾಹನು ಸಹಕರಿಸುವನು. (ಮಲ್‌ಫೂಝಾತ್, ಸಂಪುಟ–8, ಪುಟ–200 ಸಂಚಿಕೆ 1984)

ಇಂದಿನ ಸ್ಥಿತಿಯ ಬಗ್ಗೆ ಮತ್ತು ಜಮಾಅತಿನಲ್ಲಿ ಬರುವ ಕಷ್ಟಗಳ ಬಗ್ಗೆ ವಿವರಿಸುತ್ತಾ ಸಹನೆಯ ಉಪದೇಶವನ್ನು ಮಾಡುತ್ತಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ.

ಹಝ್ರತ್ ಪೈಗಂಬರ್(ಸ) ಅವರಿಗೆ ಎದುರಿಸಬೇಕಾದ ಕಷ್ಟತೆಗಳನ್ನೇ ನಮ್ಮ ಜಮಾಅತ್ ಸಹ ಅನುಭವಿಸಬೇಕಾಗುವುದು. ಅಂದಹಾಗೆ ಹೊಸ ಮತ್ತು ಮೊಟ್ಟ ಮೊದಲ ಆಪತ್ತು ಬರುವುದೇನೆಂದರೆ, ವ್ಯಕ್ತಿಯೊಬ್ಬನು ಈ ಜಮಾಅತ್‌ಗೆ ಸೇರಿದರೆ, ಕೂಡಲೇ ಮಿತ್ರಬಳಗ ಮತ್ತು ಸಂಬಂಧಿಕರು

ಬೇರ್ಪಡುತ್ತಾರೆ. ಎಲ್ಲಿಯವರೆಗೆಂದರೆ ಕೆಲವೊಮ್ಮೆ ತಂದೆ, ತಾಯಿ, ಅಣ್ಣ ತಂಗಿಯರು ಸಹ ಶತ್ರುಗಳಾಗುತ್ತಾರೆ. ಅಸ್ಸಲಾಮು ಅಲೈಕುಂ ಸಹ ಹೇಳಲು ಇಷ್ಟಪಡುವುದಿಲ್ಲ. ಮತ್ತು ಜನಾಝಾ ನಮಾಝ್ ಸಹ ನಿರ್ವಹಿಸಲು ಇಷ್ಟಪಡುವುದಿಲ್ಲ. ಈ ರೀತಿಯ ಹಲವು ಸಂಕಷ್ಟಗಳು ಎದುರಾಗುತ್ತವೆ. ಹೇಳಿದರು. ನಾನು ಬಲ್ಲೆ ಕೆಲವು ದುರ್ಬಲ ಸ್ವಭಾವದ ವ್ಯಕ್ತಿಗಳಿರುತ್ತಾರೆ. ಇಂತಹ ಕಷ್ಟಗಳ ಸಮಯ ಗಾಬರಿಗೊಳ್ಳುತ್ತಾರೆ. ಆದರೆ ನೆನಪಿಡಿರಿ. ಅಲ್ಲಾಹನ ಮೇಲೆ ದೃಢವಿಶ್ವಾಸ ಉಂಟಾಗಲು ಮತ್ತು ಪರಿಶುದ್ಧ ಬದಲಾವಣೆಯ ಸಂದರ್ಭ ಲಭಿಸಲು ಈ ಕಷ್ಟತೆಗಳು ಬರಬೇಕಾಗಿದೆ. ನೀವು ಪ್ರವಾದಿಗಳ, ಸಂದೇಶವಾಹಕರಿಂದಲೂ ದೊಡ್ಡವರೇನಲ್ಲ. ಅವರ ಮೇಲೆ ಇಂತಹ ಕಷ್ಟತೆಗಳು ಮತ್ತು ಆಪತ್ತುಗಳು ಬಂದಿವೆ. ಇದು ಬರಲು ಕಾರಣವೇನೆಂದರೆ ಅಲ್ಲಾಹನ ಮೇಲೆ ನಮ್ಮ ವಿಶ್ವಾಸ ದೃಢವಾಗಬೇಕು. ವಿಶ್ವಾಸದ ದೃಢತೆಗಾಗಿ ಈ ರೀತಿಯ ಕಷ್ಟಗಳು ಬರುತ್ತವೆ. ಮತ್ತು ಅದರಿಂದ ಪವಿತ್ರ ಬದಲಾವಣೆಯ ಸಂದರ್ಭ ಒದಗಿ ಬರುತ್ತದೆ. ದುಆಗಳನ್ನು ಮಾಡುತ್ತಿರಿ. ಅಂದಹಾಗೆ ನಿಮಗೆ ಪ್ರವಾದಿಗಳ ಅನುಸರಣೆ ಮತ್ತು ಸಹನೆಯ ರೀತಿ ಸ್ವೀಕರಿಸಿರಿ. ನಿಮಗೆ ಯಾವ ಹಾನಿಯೂ ಆಗಲಾರದು.

ಸತ್ಯವಿಶ್ವಾಸದ ಕಾರಣದಿಂದಾಗಿ ನಿಮ್ಮ ಕೈಬಿಡುವವನು ಸತ್ಯವಾದ ಮಿತ್ರನಾಗಲು ಸಾಧ್ಯವಿಲ್ಲ. ಅವನು ಸತ್ಯಮಿತ್ರನಾಗಿದದರೆ ನಿಮ್ಮ ಜೊತೆ ಬಿಡುತ್ತಿರಲಿಲ್ಲ. ನೀವು ಅಲ್ಲಾಹನು ಸ್ಥಾಪಿಸಿದ ಸಂಘಟನೆಯಲ್ಲಿ ಸೇರಿದ ಕಾರಣ ನಿಮ್ಮಿಂದ ದೂರವಿರುತ್ತಾನೆ. ಅವರೊಡನೆ ದಂಗೆ ಏಳಬೇಡಿರಿ. ಬದಲು ಅವರಿಗಾಗಿ ದುಆ ಮಾಡಿರಿ. ಕೇವಲ ಅವರೊಡನೆ ಜಗಳ ಮಾಡಬಾರದು ಎಂದಷ್ಟೇ ಅಲ್ಲ. ಬದಲು ಅವರಿಗಾಗಿ ದುಆ ಮಾಡಬೇಕು. ಅಲ್ಲಾಹನು ಅವರಿಗೆ ಸುಜ್ಞಾನ ಮತ್ತು ಸತ್ಯದ ಅರಿವು ಉಂಟಾಗುವಂತೆ ಮಾಡಲಿ. ನಿಮ್ಮ ಮೇಲೆ ಕರುಣೆ ದೋರಿ ಈ ಅನುಗ್ರಹ ನೀಡಿದಂತೆ ಅವರಿಗೂ ನೀಡುವಂತಾಗಲಿ. ಹೇಳಿದರು. ನೀವು ನಿಮ್ಮ ಸದ್ಗುಣಗಳಿಂದ ಮತ್ತು ಪವಿತ್ರ ನಡತೆಯಿಂದ ಸಾಬೀತುಪಡಿಸಿರಿ. ನೀವು ಸನ್ಮಾರ್ಗದಲ್ಲಿದ್ದೀರಿ ಎಂದು.

ನೋಡಿರಿ, ನಾನು ನಿಮ್ಮೊಡನೆ ಹೀಗೆಯೂ ಹೇಳುತ್ತೇನೆ. ಅಲ್ಲಾಹನು ಈ ಸಂಗತಿಗೆ ಎಷ್ಟು ಒತ್ತು ನೀಡುತ್ತಿದ್ದಾನೆ ಎಂದರೆ, ವ್ಯಕ್ತಿಯೊಬ್ಬನು ಈ ಜಮಾಅತಿನಲ್ಲಿ ಇದ್ದುಕೊಂಡು ಸಹನೆ ಮತ್ತು ತಾಳ್ಮೆ ತೋರಿಸುವುದಿಲ್ಲವೆಂದಾದರೆ, ಆತನು ನೆನಪಿಡಲಿ, ಆತನು ಈ ಜಮಾಅತಿಗೆ ಸೇರಿದವನಲ್ಲ. ಆದ್ದರಿಂದ ನಮ್ಮ ವಿಷಯಗಳನ್ನು ಅಲ್ಲಾಹನಿಗೆ ಒಪ್ಪಿಸಿರಿ, ಬೈಗುಳಗಳನ್ನು ಕೇಳಿಯೂ ಸಹನೆದೋರಿರಿ. ನಾನು ಸಹನೆ ತೋರಿಸುತ್ತಿರುವಾಗ, ನಿಮ್ಮ ಕೆಲಸ ಸಹ ಸಹನೆದೋರುವುದಾಗಿದೆ.

ಪವಿತ್ರ ಖುರ್‌ಆನ್‌ನಲ್ಲಿ ಸಹ ಈ ಆದೇಶವಿದೆ, ನೀವು ಅಲ್ಲಿಂದ ತೊಲಗಿರಿ ಮತ್ತು ಮೃದುಭಾಷಿಕರಾಗಿ ಉತ್ತರ ನೀಡಿರಿ. ಹಲವು ಬಾರಿ ಹೀಗೆ ಆಗುತ್ತದೆ. ವ್ಯಕ್ತಿಯೊಬ್ಬನು ತುಂಬು ಆವೇಶದಿಂದ ವಿರೋಧ ವ್ಯಕ್ತಪಡಿಸುತ್ತಾನೆ. ದಂಗೆಕೋರನ ರೀತಿಯಲ್ಲಿ ಅದರಿಂದ ದಂಗೆ ಪಸರಿಸುವ ಅಪಾಯ ಉಂಟಾಗುತ್ತದೆ. ಕೇಳುವವರು ಉತ್ತೇಜನಕ್ಕೆ ಒಳಗಾಗುತ್ತಾರೆ. ಆದರೆ ಅವರಿಗೆ ಮೃದು ರೀತಿಯ ಉತ್ತರ ದೊರೆಯುವಾಗ, ಬೈಗಳಿಂದ ನಾಚಿಕೆಪಡುತ್ತಾನೆ. ಹಲವು ಜನರು ಈ ಕಾಲದಲ್ಲಿ ನಿರ್ಲಜ್ಜರಾಗಿದ್ದಾರೆ. ಸರಿ, ದೌರ್ಜನ್ಯ ಎಸಗುತ್ತಾರೆ. ಆದರೆ ಹಲವರು ನಾಚಿಕೆಪಡುವವರೂ ಇದ್ದಾರೆ. ತಮ್ಮ ಕೃತ್ಯಗಳ ಬಗ್ಗೆ ಪಶ್ಚಾತ್ತಾಪಪಡುವವರೂ ಇದ್ದಾರೆ.

ಹಿಂದಿನ ಖುತುಬಗಳಲ್ಲಿ ನಾನು ಬಾಂಗ್ಲಾದೇಶದ ಘಟನೆಗಳ ಬಗ್ಗೆ ವಿವರಿಸುತ್ತಾ ಒಂದು ಉದಾಹರಣೆಯೂ ನೀಡಿದ್ದೆ. ದಂಗೆಕೋರರಲ್ಲಿ ಒಬ್ಬನಿಗೆ ನಮ್ಮ ಹುಡುಗ, ನೀವು ಏನು ಮಾಡುತ್ತಿದ್ದೀರಿ ಎಂಬುದರ ಬಗ್ಗೆ ನಿಮಗೆ ಅರಿವು ಇದೆಯೇ? ಯಾರ ಹೆಸರ ಮೇಲೆ ಇದನ್ನು ಮಾಡುತ್ತಿದ್ದೀರಿ? ಅವನಿಗೆ ಅರಿವು ಉಂಟಾಗಿದ ಮೇಲೆ ಅವನು ಎತ್ತಿಕೊಂಡ ಇಟ್ಟಿಗೆಯನ್ನು ಹಿಂದಕ್ಕೆ ಬಿಸಾಕಿದ ಅಥವಾ ಎತ್ತಿದ ಕಲ್ಲೊಂದನ್ನು ಕೆಳಗೆ ಬಿಸಾಕಿಬಿಟ್ಟ. ಹೇಳಿದರು. ನಾನು ನಿಮಗೆ ಸತ್ಯವಾಗಿ ಹೇಳುತ್ತೇನೆ. ಸಹನೆಯನ್ನು ಕೈಬಿಡಬೇಡಿರಿ. ಸಹನೆ ಎಂಬ ಅಸ್ತ್ರ ಹೇಗಿದೆ ಎಂದರೆ, ತೋಪುಗಳಿಂದಲೂ ಈ ಕೆಲಸ ಆಗದು. ಸಹನೆ ಮಾತ್ರ ಹೃದಯಗಳನ್ನು ಗೆಲ್ಲಬಹುದಾಗಿದೆ.

ನಿಶ್ಚಿತವಾಗಿಯೂ ನನ್ನ ಈ ಜಮಾಅತಿನ ವ್ಯಕ್ತಿಯೊಬ್ಬನು ಯಾರೊಂದಿಗಾದರೂ ಜಗಳವಾಡಿದ್ದಾನೆ ಎಂದು ಕೇಳಿಬಂದರೆ ನನಗೆ ತುಂಬಾ ದುಃಖವಾಗುತ್ತದೆ. ನನಗೆ ಇದು ಇಷ್ಟವಾದುದಲ್ಲ. ಅಲ್ಲಾಹನು ಸಹ ಈ ನಮೂನೆ ಇಷ್ಟಪಡುವುದಿಲ್ಲ. ಭಯಭಕ್ತಿಯಿಂದ ದೂರವಾದ ಮಾರ್ಗ ಅಲ್ಲಾಹನು ಬಯಸುವುದಿಲ್ಲ. ಬದಲಾಗಿ ನಾನು ನಿಮಗೆ ಹೇಳಬಯಸುತ್ತೇನೆ. ವ್ಯಕ್ತಿಯೊಬ್ಬನು ಈ ಜಮಾಅತಿನಲ್ಲಿ ಇದ್ದುಕೊಂಡು ಸಹನೆ ಮತ್ತು ತಾಳ್ಮೆ ತೋರಿಸುವುದಿಲ್ಲವೆಂದಾದರೆ ಆತನ ನೆನಪಿರಲಿ, ಆತನು ಈ ಜಮಾಅತಿಗೆ ಸೇರಿದವನಲ್ಲ, ಇದು ಬಹುದೊಡ್ಡ ಎಚ್ಚರಿಕೆಯಾಗಿದೆ, ನಮಗೆ ಯಾವಾಗಲೂ ನೆನಪಿಡಬೇಕಾಗಿದೆ. ಹೇಳಿದರು. ನನಗೆ ಬೈಯ್ಯುರನ್ನು ನೋಡಿ ನಿಮಗೆ ಆವೇಶ ಬರುತ್ತಿರಬಹುದು, ಅವಾಚ್ಯ ಶಬ್ಧಗಳಿಂದ ಬೈಯ್ಯುವುದನ್ನು ನೋಡಿಯೇ ನನಗೆ ಅವಾಚ್ಯ ಶಬ್ಧಗಳಿಂದ ಬಯ್ಯುವುದರಿಂದ ನಿಮಗೆ ಸಿಟ್ಟು ಬಂದರೆ ಅದನ್ನು ಅಲ್ಲಾಹ್‌ನ ಸುಪರ್ಧಿಗೆ ಬಿಟ್ಟುಬಿಡಿ. ನೀವು ಪ್ರತೀಕಾರ ತೆಗೆದುಕೊಳ್ಳುವುದು ಬೇಡ. ನನ್ನ ವಿಷಯ ಅಲ್ಲಾಹನಿಗೆ ಬಿಡಿ. ನೀವು ಬೈಯ್ಯುವುದನ್ನು ಕೇಳಿಯೂ ಸಹನೆ ಮತ್ತು ತಾಳ್ಮೆಯಿಂದಿರಿ. ನಾನು ಈ ಜನರಿಂದ ಎಷ್ಟೊಂದು ಬೈಗಳನ್ನು ಕೇಳಿಸಿಕೊಳ್ಳುತ್ತೇನೆ. ನಿಮಗೇನು ಗೊತ್ತು. ಎಷ್ಟೇ ಸಮಯ ಅವಾಚ್ಯ ಶಬ್ಧಗಳಿಂದ ತುಂಬಿದ ಪತ್ರಗಳು ಬರುತ್ತವೆ. ಬಿಡಿ ಕಾರ್ಡ್‌ಗಳಲ್ಲಿ ಬೈಗಳನ್ನು ಬರೆದಿರುತ್ತಾರೆ. ಬೈಕಂಗ್ (ಚೀಟಿ ಹಚ್ಚದೆ) ಪತ್ರಗಳು ಕಳುಹಿಸುತ್ತಾರೆ. ಅದಕ್ಕೆ ದುಡ್ಡು ಕೊಡಬೇಕಾಗುತ್ತದೆ. ಟಿಕಟ್ ಹಚ್ಚದೇ ಪತ್ರಗಳನ್ನು ಕಳುಹಿಸುತ್ತಾರೆ. ಮತ್ತು ಓದುತ್ತಿದ್ದೇವೆಯಾದರೆ ಅದರಲ್ಲಿ ಬರೀ ಬೈಗಳೇ ತುಂಬಿರುತ್ತವೆ. ಅವಾಚ್ಯ ಬೈಗಳಿರುತ್ತವೆ. ಖಂಡಿತವಾಗಿಯೂ ನಾನು ಹೇಳಬಲ್ಲೆ. ಯಾವ ಪ್ರವಾದಿಗೂ ಸಹ ಇಂತಹ ಬೈಗಳು ಬೈದಿರಲಿಕ್ಕಿಲ್ಲ. ಬಹುಶ: ಅಬುಜಹಲ್‌ನಲ್ಲಿಯೂ ಈ ತರಹ ದುಷ್ಟ ಬೈಗಳು ಇರಲಿಲ್ಲವೇನು. ಆದರೆ ಇವೆಲ್ಲಾ ಕೇಳಿಸಿಕೊಳ್ಳಬೇಕಾಗುತ್ತದೆ. ನಾನು ಸಹಿಸಿಕೊಳ್ಳುತ್ತಿದ್ದೇವೆಂದು ನಿಮಗೂ ಸಹಿಸಿಕೊಳ್ಳಬೇಕಾಗುತ್ತದೆ. ವೃಕ್ಷಕ್ಕಿಂತ ಶಾಖೆಗಳಂತೂ ಮೇಲಲ್ಲ."

ತನ್ನ ವ್ಯಕ್ತಿತ್ವಕ್ಕೆ ಸಂಬಂದಿಸಿ ಅಪಾರ ಸಹನೆಯುಳ್ಳವರಾಗಿದ್ದರು. ಹಝ್ರತ್ ಮುಸ್ಲಿಹ್ ಮೌಊದ್(ಅ) ರವರು ಹೇಳಿದಂತೆ ಅವರು ಕಠಿಣವಾಗಿ ವರ್ತಿಸುವುದು ಜನರ ಸುಧಾರಣೆಗಾಗಿ ಮಾತ್ರವಾಗಿರುತ್ತದೆ. ಇದು ಅಲ್ಲಾಹನಿಂದ ಅವರಿಗೆ ದೊರೆತ ಹಕ್ಕಾಗಿದೆ. ಪ್ರತಿಯೊಬ್ಬರಿಗೂ ಈ ಹಕ್ಕು ಇರುವುದಿಲ್ಲ. ನಾವು ಇಂತಹ ಮಾತುಗಳನ್ನು ಆಡಿದರೆ ಸುಧಾರಣೆಯ ಬದಲಿಗೆ ದಂಗೆ ಉತ್ಪನ್ನವಾಗುವುದು.

ಮತ್ತೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಹೇಳುತ್ತಾರೆ. ನೀವು ನೋಡುತ್ತೀರಿ, ಎಲ್ಲಿಯವರೆಗೆ ಅವರು ನಿಂದಿಸಬಹುದು. ಅಂತಿಮವಾಗಿ ಅವರು ದಣಿದುಕೊಳ್ಳುವರು, ಅವರ ಬೈಗಳು ಅವರ ತಂತ್ರ ಕುತಂತ್ರಗಳು ಖಂಡಿತವಾಗಿಯೂ ನನಗೆ ಬೇಸರ ತರುವುದಿಲ್ಲ. ಆದ್ದರಿಂದ ನಾವು ಸಹ ಬೇಸರಪಡಬಾರದು. ನಾನು ಅಲ್ಲಾಹನ ಕಡೆಯಿಂದ ಕಳುಹಿಸಲ್ಪಡದಿದ್ದರೆ ನಿಸ್ಸಂದೇಹವಾಗಿ ನಾನೂ ಸಹ ಭಯಗೊಳ್ಳುತ್ತಿದೆ. ಆದರೆ ನಾನು ನಿಶ್ಚಿತವಾಗಿಯೂ ಬಲ್ಲೆನು. ನನಗೆ ಅಲ್ಲಾಹನು ನಿಯುಕ್ತಗೊಳಿಸಿದ್ದಾನೆ. ಹಾಗಿರುವಾಗ ನಾನು ಇಂತಹ ಕ್ಷುಲ್ಲಕ ವಿಷಯಗಳಿಗೆ ಹೇಗೆ ಲೆಕ್ಕಿಸಲಿ, ಇದು ಆಗದ ಮಾತು. ನೀವು ಸ್ವಯಂ ಯೋಚನೆ ಮಾಡಿ ನೋಡಿ, ಈ ಬೈಗಳು ಯಾರಿಗೆ ನಷ್ಟವನ್ನುಂಟುಮಾಡಿದೆ. ಅವರಿಗೂ ಅಥವಾ ನನಗೂ ಅವರ ಜಮಾಅತ್ ಕುಸಿದಿದೆ ಮತ್ತು ನನ್ನ ಜಮಾಅತ್ ವೃದ್ಧಿಸಿದೆ. ಜಮಾಅತ್ ವೃದ್ಧಿಸುತ್ತಿದ್ದರೆ ಅವರು ಅವರಿಂದಲೇ ಅಲ್ಪಾ ಬರುತ್ತಿರುವುದು. ಈ ಬೈಗಳು ನಮಗೆ ಅಡ್ಡ ಬರುತ್ತಿದ್ದರೆ ಎರಡು ಲಕ್ಷಕ್ಕಿಂತ ಹೆಚ್ಚು ಜನರ ಜಮಾಅತ್ ಆಗಲು ಹೇಗೆ ಸಾಧ್ಯವಿತ್ತು."

ಇದು ಅಲ್ಲಾಹನ ಅನುಗ್ರಹದಿಂದ ಲೋಕದ ಪ್ರತಿಯೊಂದು ದೇಶದಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ಅವರ ಸಂದೇಶ ತಲುಪಿದೆ. ಮತ್ತು ಜಮಾಅತ್ ಸ್ಥಾಪನೆಗೊಂಡಿದೆ. ಏನು. ಇದು ಯಾವುದೇ ಪ್ರತೀಕಾರ ಅಥವಾ ಶಕ್ತಿ ಪ್ರದಶ್ನದಿಂದ ಆಗಿತ್ತೇ? ಅಲ್ಲ, ಬದಲಾಗಿ ತ್ಯಾಗ, ಸಹನೆ ಮತ್ತು ಪ್ರಾರ್ಥನೆಗಳ ಕಾರಣದಿಂದ ಆಗಿತ್ತು.

ಆದ್ದರಿಂದ ಈ ಮಹತ್ತರ ಉದ್ದೇಶ ಸಾಧಿಸಲು ನಮಗೆ ಸಹನೆಯನ್ನು ತೋರುತ್ತಾ ಮುಂದುವರೆಯಬೇಕಾಗಿದೆ.

ಈ ಜನರು ಅವರಿಂದಲೇ ಬಂದಿರುವರೇ ಅಥವಾ ಇನ್ನೂ ಬೇರೆ ಕಡೆಯಿಂದ? ಅವರು ನನ್ನ ಮೇಲೆ ಕುಫರ್‌ನ ಫತ್ವಾ ಹೊರಡಿಸಿದರು. ಆದರೆ ಈ ಕುಫರ್ ಫತ್ವಾದ ಪರಿಣಾಮ ಏನಾಯಿತು? ಜಮಾಅತ್‌ನ ವೃದ್ಧಿಯೇ ಆಗಿದೆ. ಒಂದು ವೇಳೆ ಈ ಸಂಘಟನೆ ನಮ್ಮ ಯೋಜನೆ ಅನ್ವಯ ತಡೆಯುತ್ತಿದ್ದರೆ, ಅವಶ್ಯವಾಗಿ ಅವರ ಫತ್ವಾಗಳ ಪರಿಣಾಮ ಆಗುತ್ತಿತ್ತು. ನನ್ನ ಮಾರ್ಗದಲ್ಲಿ ಅಡೆತಡೆ ಉಂಟಾಗುತ್ತಿದ್ದವು. ಆದರೆ ಯಾವ ಮಾತು ಅಲ್ಲಾಹನಿಂದ ಘಟಿಸುವುದೋ, ಅದನ್ನು ನಾಶಗೊಳಿಸುವುದು ಯಾರಿಂದಲೂ ಸಾಧ್ಯವಿಲ್ಲ. ಅವರು ಏನೆಲ್ಲ ಯೋಜನೆಗಳನ್ನು ರೂಪಿಸಿದರೂ, ತಿಳಿಯುವವರಿಗೆ ವಿಫಲತೆಯೇ ಕೈಗೆ ಎಟಕುತ್ತದೆ. ನಾನು ಸ್ಪಷ್ಟವಾಗಿ ಹೇಳುವೆನು. ನನ್ನ ವಿರೋಧ ಮಾಡುವವರು ಇವರು ಒಂದು ಮಹೋನ್ನತ ರಭಸದಿಂದ ಹರಿಯುತ್ತಿರುವುದು ಹೊಳೆಯನ್ನು ತನ್ನ ಕೈಗಳಿಂದ ತಡೆಯಬಯಸುತ್ತಾರೆ.

ನೀರಿನ ಒಂದು ಪ್ರವಾಹವೇ ಬರುತ್ತದೆ. ಅವರು ತಮ್ಮ ಕೈಯನ್ನು ಒಡ್ಡಿ, ನೀರು ನಿಲ್ಲಬಹುದು ಎಂದು ಭಾವಿಸುತ್ತಾರೆ. ಪರಿಣಾಮ ಸ್ಪಷ್ಟವಾಗಿದೆ. ಅದು ನಿಲ್ಲಲು ಸಾಧ್ಯವಿಲ್ಲ. ಅವರು ಬೈಗಳಿಂದ ತಡೆಯಬಯಸುತ್ತಾರೆ.

ಆದರೆ ನೆನಪಿಟ್ಟುಗೊಳ್ಳಲಿ ಎಂದು ತಡೆಯಲು ಸಾಧ್ಯವಿಲ್ಲ. ಬೈಗಳನ್ನು ಹಾಕುವುದು ಸಜ್ಜನರ ಕೆಲಸವೇ. ತಾನು ಅಂತಹ ಮುಸ್ಲಿಮರ ಮೇಲೆ ವಿಷಾದವನ್ನು ಪ್ರಕಟಿಸುತ್ತೇವೆ. ಅವರು ಯಾವ ರೀತಿಯ ಮುಸಲ್ಮಾನರು, ಬಾಯಿ ತೆರೆದರೆ ಬೈಗಳು ಹೊರಡುತ್ತವೆ. ಪಾಕಿಸ್ತಾನದಲ್ಲಿ ಅವರ ಮೆರವಣಿಗೆಗಳಲ್ಲಿ ವಿಚಿತ್ರ ರೀತಿಯ ಬೈಗಳು ಕೇಳಿಬರುತ್ತವೆ.

ಹೇಳಿದರು. ನಾನು ಅಲ್ಲಾಹನ ಮೇಲೆ ಆಣೆವಹಿಸಿ ಹೇಳುವೆನು. ಇಂತಹ ಬೈಗಳು ಯಾವ ಅಧಮರು ಕೂಡ ಬೈಯಲಿಕ್ಕಿಲ್ಲ ಅದು ಈ ಮುಸ್ಲಿಮರು ಕೇಳಬೇಕಾಗಿದೆ, ಹೇಳೂರ್ಥಾರೆ. ಅವರು ಈ ಬೈಗಳ ಮೂಲಕ ತಮ್ಮ ಪರಿಚಯವನ್ನು ನೀಡುತ್ತಿದದಾರೆ. ಬೈಗಳಿಂದ ಅವರ ಅವಸ್ಥೆಯೇ ಹೊರಬಂದಂತಾಗುತ್ತದೆ. ಅವರ ಮಾನಸಿಕ ಸ್ಥಿತಿ ಏನು, ಅವರ ಕಾರ್ಯವೈಖರಿ ಏನು ಎಂಬುದನ್ನು ತಿಳಿದುಬರುತ್ತದೆ. ಈ ಮೂಲಕ ಅವರು ಫಾಸಿಖ್ ಮತ್ತು ಫಾಜರ್ ಎಂದು ಸ್ವಯಂ ಒಪ್ಪಿಕೊಂಡಂತಾಗಿದೆ. ಅಲ್ಲಾಹನು ಅವರ ಕಣ್ಣುಗಳನ್ನು ತೆರೆಸಲಿ. ಅವರ ಮೇಲೆ ಕೃಪೆದೋರಲಿ. ಆಮೀನ್.

ಮತ್ತು ಹೇಳಿದರು. ಇಂತಹ ಬೈಯ್ಯುವವರು ಕೋಟಿಗಳ ಸಂಖ್ಯೆಯಲ್ಲಿದ್ದರು. ಅಲ್ಲಾಹನ ಕಾರ್ಯಗಳನ್ನು ತಡೆಯಲು ಸಾಧ್ಯವಿಲ್ಲ. ಇವರು ಒಂದು ಕಾರ್ಡ್‌ನ ದುಡ್ಡಷ್ಟೇ ನಷ್ಟವಾಗುವುದು ಎಂದು ಭಾವಿಸುತ್ತಾರೆ. ಆದರೆ ಈ ದುಡ್ಡಿನ ನಷ್ಟದ ಜೊತೆಯಲ್ಲಿ ತಮ್ಮ ಕರ್ಮಗಳಿಗೆ ಮಸಿ ಬಳಿದಂತಾಗುವುದು ಎಂಬ ಸತ್ಯ ಅರಿಯರು. ಕಾರ್ಡಿನಲ್ಲಿ ಬರೆಯುವ ಬೈಗಳ ಮೂಲಕ ಅವರು ತಮ್ಮ ಕರ್ಮಗಳನ್ನು ಸಹ ಮಸಿಬಳಿಯುತ್ತಿದ್ದಾರೆ. ಅವರು ಇನ್ನೇಕೆ ಬಯ್ಯುತ್ತಿದ್ದಾರೆ. ತಿಳಿಯದು, ನಾನು ಕೇವಲ ಇಷ್ಟು ಮಾತ್ರ ಹೇಳಿದುದಕ್ಕೆ, ಪವಿತ್ರ ಖುರ್‌ಆನ್‌ನ್ನು ಕೈಬಿಡಬೇಡಿ ಮತ್ತು ಹಝ್ರತ್ ಪೈಗಂಬರ್(ಸ) ರನ್ನು ಧಿಕ್ಕರಿಸಬೇಡಿ. ವಿಚಿತ್ರವಾದ ಮಾತೇನೆಂದರೆ ಪವಿತ್ರ ಖುರ್‌ಆನ್‌ನಲ್ಲಿ ಹಝುರತ್ ಈಸಾ(ಅ) ಮೃತಪಟ್ಟಿರುವರು ಎಂದಿದೆ. ಮತ್ತು ಎಂದೂ ಭೂಮಿಯ ಮೇಲೆ ಬರಲಾರರು. ಆದರೆ ಇವರು ಅದನ್ನು ನಂಬುವುದಿಲ್ಲ. ಖುರ್‌ಆನ್‌ಗೆ ವಿರುದ್ಧವಾದ ಈ ವಿಶ್ವಾಸಕ್ಕೆ ಅಂಟಿಕೊಂಡಿದ್ದಾರೆ. ನಾನು ಆಗಮಿಸಿಲ್ಲವಾಗಿದ್ದರೆ, ಅಲ್ಲಾಹನು ಈ ಸಂಘಟನೆ ಸ್ಥಾಪನೆ ಮಾಡದಿರುತ್ತಿದ್ದರೆ, ಇವರು ಬೇಕಾದ್ದನ್ನು ಹೇಳಬಹುದಾಗಿತ್ತು. ಏಕೆಂದರೆ ಅವರಿಗೆ ಜಾಗೃತಪಡಿಸುವವರು ಮತ್ತು ತಿಳಿಯಪಡಿಸುವವರು ಅವರಲ್ಲಿ ಇರುತ್ತಿದ್ದಾರೆ. ಆದರೆ ಈಗ ಅಲ್ಲಾಹನು ನನಗೆ ನಿಯುಕ್ತಗೊಳಿಸಿ ಕಳುಹಿಸಿದ್ದಾಆನೆ. ನಾನು ಹಝ್ರತ್ ಪೈಗಂಬರ್(ಸ) ಅವರು ಅಂತಿಮ ತೀರ್ಪುಗಾರ, ಎಂದಿದ್ದವರೆ ಆಗಿರುತ್ತೇನೆ. ಹೀಗಿರುವಾಗ ನನ್ನ ತೀರ್ಪಿಗೆ ಧ್ವನಿ ಮೂಡಿಸುವುದು ಅವರ ಹಕ್ಕಾಗಿರುವುದಿಲ್ಲ. ಭಯಭಕ್ತಿಯ ಮಾರ್ಗವೇನೆಂದರೆ ನನ್ನ ಮಾತುಗಳಿಗೆ ಕಿವಿಗೊಟ್ಟು ಕೇಳಬೇಕಾಗಿತ್ತು. ಮತ್ತು ಗಮನ ನೀಡಬೇಕಾಗಿತ್ತು. ನನ್ನನ್ನು ತಿರಸ್ಕರಿಸಲು ಅವಸರ ಮಾಡಬಾರದಿತ್ತು.

ನಾನು ಸತ್ಯವಾಗಿ ಹೇಳುತ್ತೇನೆ. ನನ್ನ ಆಗಮನದ ನಂತರ ಅವರಿಗೆ ಬಾಯಿ ತೆರೆಯುವ ಹಕ್ಕಿಲ್ಲ. ಏಕೆಂದರೆ ಅಲ್ಲಾಹನ ಕಡೆಯಿಂದ ಬಂದಿರುವನು ಮತ್ತು ಅಂತಿಮ ತೀರ್ಪುಗಾರ ಸೇವೆಯಲಲಿ ಬಂದಿರುವನು.

(ಮಲ್ಫೂಝಾತ್, ಸಂಪುಟ-7, ಪುಟ-203-206, 1984)

ಹಝ್ರತ್ ಪೈಗಂಬರ್(ಸ) ಅಲ್ಲಾಹನ ಆಜ್ಞೆ ಮೇರೆಗೆ ಯಾವ ಮಟ್ಟದ ಸಹನೆಯನ್ನು ತೋರಿಸುವರು ಅದರ ಎದುರಿನಲ್ಲಿ ಯಾರಿಗೂ ಆ ಮಟ್ಟ ತೋರಿಸಲು ಸಾಧ್ಯವಿಲ್ಲ. ಅದರ ವಿವರ ನೀಡುತ್ತಾ ಹಝ್ರತ್ ಮೌಊದ್ (ಅ) ಹೇಳುತ್ತಾರೆ. ಹಝ್ರತ್ ಈಸಾ (ಅ) ರ ಸಮುದಾಯ ಅವರನ್ನು ಬೇಗನೇ ನಂಬಿಕೊಂಡಿತ್ತು. ಆದ್ದರಿಂದ ಅವರಿಗೆ ತನ್ನ ಸಮುದಾಯದ ಕಡೆಯಿಂದ ಯಾವುದೇ ತೊಂದರೆ ಎದುರಿಸಬೇಕಾಗಿ ಬಂದಿರಲಿಲ್ಲ. ಆದರೆ ಹಝುರತ್ ಪೈಗಂಬರ್ (ಸ) ರಿಗೆ ತನ್ನ ಸಮುದಾಯದಿಂದಲೇ ನಿರಾಕರಣೆ ಮತ್ತು ಕಷ್ಟತೆಗಳನ್ನು ಎದುರಿಸಬೇಕಾಗಿ ಬಂದಿತ್ತು. ಅದಾಗ್ಯೂ ಹಝ್ರತ್ ಪೈಗಂಬರ್ (ಸ) ರಿಗೆ ಎಂತಹ ಅದ್ಭುತವಾದ ಯಶಸ್ಸುಗಳು ದೊರೆತಿವೆ. ಅದು ಅವರ ಶ್ರೇಷ್ಠತೆಗೆ ಹಿಡಿದ ಕನ್ನಡಿಯಾಗಿದೆ.

ಹಝ್ರತ್ ಪೈಗಂಬರ್(ಸ) ಅಲ್ಲಾಹನ ಇಚ್ಛೆಯ ಮೇರೆಗೆ ತಬ್ಲೀಗ್ನ್ನು ಪ್ರಾರಂಭಿಸಿದ ಪ್ರಾರಂಭದಲ್ಲೇ, ಅವರ ಸಮುದಯ ಅವರ ನಿರಾಕರಣೆ ಮಾಡುವಂತಹ ಹರಿತ ಎದುರಾಯಿತು. ಬರೆಯಲಾಗಿದೆ. ಅವರು (ಸ) ಖುರೈಶರಿಗೆ ಆಹ್ವಾನಿಸಿದರು. ಎಲ್ಲರನ್ನು ಕರೆದು ಹೇಳಿದರು. ನಾನು ನಿಮ್ಮಿಂದ ಒಂದು ಮಾತನ್ನು ಕೇಳಬಯಸುತ್ತೇನೆ. ಅದಕ್ಕೆ ಉತ್ತರ ನೀಡಿರಿ ಎಂದರೆ ನಾನು ನಿಮಗೆ, ಈ ಗುಡ್ಡದ (ಪರ್ವದ) ಹಿಂದೆ ಒಂದು ದೊಡ್ಡ ಸೈನ್ಯ ಬಂದು ಸೇರಿದೆ. ಅದು ನಿಮ್ಮ ಮಲೇಲೆ ಅವಕಾಶ ದೊರೆತಾಗ ಆಕ್ರಮಣ ಮಾಡಲು ಹೊಂಚು ಹಾಕುತ್ತಿದೆ ಎಂದು ಹೇಳಿದರೆ ನಂಬುವರೆ. ಎಲ್ಲರೂ ಒಕ್ಕೊರಲೇಯಿಂದ ಧ್ವನಿಗೂಡಿಸಿದರು. ನಿಸ್ಸಂದೇಹವಾಗಿಯೂ ನಾವು ಈ ಮಾತನ್ನು ನಂಬುತ್ತೇವೆ. ಏಕೆಂದರೆ ನೀವು ಎಂದೆಂದಿಗೂ ಸತ್ಯವನ್ನೇ ಹೇಳಿದವರಾಗಿದ್ದೀರಿ. ಅವರು ಈ ಮಾತನ್ನು ಒಪ್ಪಿಕೊಂಡ ನಂತರ ಹಝ್ರತ್ ಪೈಗಂಬರ್ (ಸ) ಹೇಳಿದರು. ನೋಡಿರಿ! ನಾನು ಸತ್ಯವಾಗಿ ಹೇಳುತ್ತೇನೆ. ನಾನು ಅಲ್ಲಾಹನ ಪ್ರವದಿಯಾಗಿದ್ದೇನೆ, ನಾನು ನಿಮಗೆ ಬರುವ ಶಿಕ್ಷೆಯಿಂದ ಎಚ್ಚರಿಸಲು ಬಂದಿದ್ದೇನೆ. ಇಷ್ಟು ಹೇಳಿದ್ದೆ ತಡ ಎಲ್ಲರೂ ಕೋಪೋದ್ರೇಕಗೊಂಡರು. ದುಷ್ಟನೊಬ್ಬನು ಹೇಳಿದ. **ತಬ್ಬನ್‌ಲಕ ಸಾಏರಲ್ ಯೌಮಿ"** ಎಂದರೆ ಪೈಗಂಬರ್(ಸ) ರ ಕುರಿತು, ನೌಝುಬಿಲ್ಲಾಹ್, **"ಹಾಳಾಗಿ ಹೋಗಲಿ"** ಎಂಬ ಪದವನ್ನು ಉಚ್ಚರಿಸಿತು. ಅಕಟಾಕಟ! ಯಾವ ಮಾತು ಅವರ ಮೋಕ್ಷಕ್ಕಾಗಿ ಅವರ ಹಿತಕ್ಕಾಗಿ ಮುಂದಿಟ್ಟಿದ್ದರು. ಆ ನತಭಾಗ್ಯ ಸಮುದಾಯವು ಅದನ್ನೇ ತಪ್ಪಾಗಿ ಗ್ರಹಿಸಿತು ಮತ್ತು ವಿರೋಧ ಮಾಡತೊಡಗಿದರು. ಈಗ ಇದರ ಎದುರಾಗಿ ಮೂಸಾ(ಅ) ರ ಸಮುದಾಯವನ್ನು ನೋಡಿರಿ, ಬನಿಈಸ್ರಾಯಿಲ್ ಅದೊಂದು ಕಠಿಣಹೃದಯಿ ಸಮುದಾಯವಾಗಿದ್ದರೂ ಅವರು ಹಝ್ರತ್ ಮೂಸಾ (ಅ) ರವರ ಪ್ರಚಾರವನ್ನು ತಕ್ಷಣದಿಂದ ಸ್ವೀಕರಿಸಿತು. ಇತ್ತ ನೋಡಿ ಮೂಸಾ (ಅ) ರಿಗಿಮತ ಶ್ರೇಷ್ಠವಾದ ಸಮುದಾಯವು ಸ್ವೀಕರಿಸಲಿಲ್ಲ ಅವರು (ಅ) ಮುಂದುವರೆದು ಹಝ್ರತ್ ಮೂಸಾ (ಅ) ಸಮುದಾಯದ ಉದಾಹರಣೆಯನ್ನು ನೀಡುತ್ತಿದ್ದಾರೆ. ಹಝ್ರತ್ ಮೂಸಾ (ಅ) ರನ್ನು ಅವರ ಸಮುದಾಯವು ಸ್ವೀಕರಿಸಿತು. ಆದರೆ ಹಝ್ರತ್ ಮೂಸಾ (ಅ) ಗಿಂತ ಶ್ರೇಷ್ಠ ಪ್ರವಾದಿಯನ್ನು ಸ್ವೀಕರಿಸಲಿಲ್ಲ ವಿರೋಧಕ್ಕೆ ನಿಂತರು. ಆಪತ್ತುಗಳ ಪರಂಪರೆ ಪ್ರಾರಂಭವಾಯಿತು. ಪೈಗಂಬರ್(ಸ) ಅನ್ನು ಹತ್ಯೆ ಮಾಡಲು ಹೊಂಚು ಹಾಕಿದರು. ಇದು ಹದಿಮೂರು ವರ್ಷಗಳ ಕಾಲ ಮುಂದುವರೆದಿತ್ತು. ಹದಿಮೂರು ವರ್ಷಗಳ ಕಾಲ ಸಣ್ಣ ವಿಷಯವೇನಿಲ್ಲ. ಈ ಅವಧಿಯಲ್ಲಿ ಅವರು ಸಹಿಸಿದ ಕಷ್ಟನಷ್ಟಗಳು ಅಷ್ಟಿಟಲ್ಲ. ಅದೇನು ಸರಳವಾಗಿರಲಿಲ್ಲ. ಆದರೆ ಅಲ್ಲಾಹನ ಕಡೆಯಿಂದ ಹಝ್ರತ್ ಪೈಗಂಬರ್ (ಸ) ರಿಗೆ ಸಹನೆ ಮತ್ತು ಸ್ಥಿರಚಿತ್ತತೆ ತೋರಿಸಲು ನಿರ್ದೇಶನ ನೀಡಲಾಗಿತ್ತು. ಇತ್ತ ಕಷ್ಟಗಳನ್ನು ಒಡ್ಡುತ್ತಿದ್ದರು. ಅತ್ತ ಅಲ್ಲಾಹನು ಸಹನೆದೋರಲು ಮತ್ತು ಸ್ಥಿರಚಿತ್ತತೆ ತೋರಿಸಲು ನಿರ್ದೇಶನ ನೀಡುತ್ತಿದ್ದನು. ಇದುವೇ ಸಹನೆಯ ನಿಜವಾದ ಅರ್ಥವಾಗಿದೆ. ಹಿಂದಿನ ಪ್ರವಾದಿಗಳು ಸಹನೆದೋರಿದಂತೆ ನೀನು ಕೂಡ ಸಹನೆದೋರು ಎಂದು ಪದೇ ಪದೇ ಆದೇಶ ನೀಡಲಾಗಿತ್ತು. ಹಾಗೆ ಅವರು ನಿರಾಶೆಗೊಳ್ಳದೇ ಮುಂದಡಿಯಿಟ್ಟರು. ವಾಸ್ತವವೇನೆಂದರೆ ಹಝ್ರತ್ ಪೈಗಂಬರ್ (ಸ) ರವರ ಸಹನೆ ಹಿಂದಿನ ಪ್ರವಾದಿಗಳ ಹಾಗೆ ಇರಲಿಲ್ಲ. ಏಕೆಂದರೆ ಅವರುಗಳು ಒಂದು ಪರಿಮಿತ ಸಮುದಾಯಕ್ಕೆ ಮಾತ್ರ ಆಗಮಿಸುತ್ತಿದ್ದರು. ಅವರ ಕಷ್ಟಗಳು ಸಹ ಪರಿಮಿತದಲ್ಲಿರುತ್ತಿದ್ದವು. ಆದರೆ ಅದರ ಎದುರಿನಲ್ಲಿ ಹಝ್ರತ್ ಪೈಗಂಬರ್ (ಸ) ರವರ ಸಹನೆ ತುಂಬಾ ಶ್ರೇಷ್ಠವಾಗಿತ್ತು. ಏಕೆಂದರೆ ಅವರುಗಳು ಒಂದು ಪರಿಮಿತ ಸಮುದಾಯಕ್ಕೆ ಮಾತ್ರ ಆಗಮಿಸುತ್ತಿದ್ದರು. ಅವರ ಕಷ್ಟಗಳು ಸಹ ಪರಿಮಿತದಲ್ಲಿರುತ್ತಿದ್ದವು ಆದರೆ ಅದರ ಎದುರಿನಲ್ಲಿ ಹಝ್ರತ್ ಪೈಗಂಬರ್ (ಸ) ರವರ ಸಹನೆ ತುಂಬಾ ಶ್ರೇಷ್ಠವಾಗಿತ್ತು. ಏಕೆಂದರೆ ಮೊದಲಾಗಿ ಅವರ ಸಮುದಾಯವೇ ಅವರಿಗೆ ಎದುರಾಯಿತು ಮತ್ತು ಕಷ್ಟಗಳನ್ನು ನೀಡತೊಡಗಿದರು, ಅದಲ್ಲದೇ ಕ್ರೈಸ್ತ ಸಮುದಾಯವು ಅವರ (ಸ) ಶತ್ರುವಾಗಿತ್ತು.

ಹಝ್ರತ್ ಈಸಾ(ಅ) ಕೇವಲ ಅಲ್ಲಾಹನ ದಾಸ ಮಾತ್ರವಾಗಿದ್ದರು ಎಂಬ ಸಂದೇಶ ತಿಳಿಸಿದಾಗ ಅವರು ಕೋಪದಿಂದ ಬೆಂಕಿಯಾದರು. ಏಕೆಂದರೆ ಅವರು ಅವರಿಗೆ ದೇವರನ್ನು ಆರಾಧಿಸುತ್ತಿದ್ದರು. ಹಝ್ರತ್ ಪೈಗಂಬರ್(ಸ) ಆಗಮಿಸಿ ಅದರ ನೈಜತೆಯನ್ನು ಬಹಿರಂಗಪಡಿಸಿದರು. ಇದು ಸಹಜವಾದ ಮಾತಾಗಿದೆ. ಮನುಷ್ಯನು ಯಾವುದನ್ನು ದೇವನನ್ನಾಗಿ ನಂಬುತ್ತಾನೆ. ಮತ್ತು ತನ್ನ ಆರಾಧ್ಯವನ್ನಾಗಿ ಮಾಡಿಕೊಳ್ಳುತ್ತಾನೆ. ಅದನ್ನು ತ್ಯಜಿಸುವುದು. ಸುಲಭವಾಗಿರುವುದಿಲ್ಲ. ಬದಲು ಅದನ್ನು ತ್ಯಜಿಸುವುದು ತುಂಬಾ ಕಷ್ಟಕರವಾಗಿ ಬಿಡುತ್ತದೆ. ಕ್ರೈಸ್ತರ ನಂಬಿಕೆ ಮನದಟ್ಟಾಗಿಬಿಟ್ಟಿತ್ತು. ಆದ್ದರಿಂದ ಅವರು ಹಝ್ರತ್ ಪೈಗಂಬರ್ (ಸ)ರಿಂದ ಅವರ ನಂಬಿಕೆಯ ಸ್ವಯಂಕೃತ ದೇವನನ್ನು ಮನುಷ್ಯನು ಎಂದಾಗ, ಅವರ (ಸ) ಜೀವ ಶತ್ರುಗಳಾದರು. ಒಂದೆಡೆ ತಮ್ಮ ಸಮುದಾಯ ಶತ್ರು, ಅವಿಶ್ವಾಸಿಗಳು ಶತ್ರು, ವಿಗ್ರಹಧಾರಿಗಳು ಶತ್ರು, ಕ್ರೈಸ್ತರು ಸಹ ಶತ್ರುಗಳಾದರು. ಅದೇ ರೀತಿ ಯಹೂದ್ಯರಲ್ಲೂ ಹಲವು ಬಹುದೇವಾಧಾರಿತ ಆಚರಣೆಗಳು ಉಂಟಾಗಿದ್ದವು. ಅವರು ಹುಝೂರರ ಮಸೀಹರನ್ನು ನಿರಾಕರಿಸಿದ್ದರು. ಹಝ್ರತ್ ಈಸಾ (ಅ) ರನ್ನು ನಂಬಲು ಸಿದ್ಧರಿರಲಿಲ್ಲ. ಅವರನ್ನು ಎಚ್ಚರಿಸಿದಾಗ ಅವರೂ ವಿರೋಧಕ್ಕೆ ತಯಾರಾಗಿ ನಿಂತರು. ಈಗ ನೋಡಿ ಯಹೂದ್ಯರು ಸಹ, ಕ್ರೈಸ್ತರು ಸಹ, ಬಹುದೇವಾರಾಧಕರು ಸಹ, ಇತರ

ಧರ್ಮಿಯರು ಸಹ, ಒಟ್ಟಿನಲ್ಲಿ ಎಲ್ಲರೂ ವಿರೋಧಿಗಳಾದರು. ಯಹೂದಿ ವಿರೋಧಿಗಳಾಗಲು ಕಾರಣವೇನೆಂದರೆ ಅವರು ಹಝ್ರತ್ ಈಸಾ(ಅ) ರನ್ನು ಮೋಸಗಾರ ಮತ್ತು ಸುಳ್ಳುಗಾರ ಎನ್ನುತ್ತಿದ್ದರು. ಅದರ ಬದಲು ಹಝ್ರತ್ ಪೈಗಂಬರ್ (ಸ) ಅವರನ್ನು ಸುಳ್ಳುಗಾರರು ಎನ್ನುವವರು, ತಾವೇ ಸುಳ್ಳುಗಾರರಾಗಿದ್ದೀರಿ. ಏಕೆಂದರೆ ಅಲ್ಲಾಹನ ಓರ್ವ ನಿತ್ಯ ಪ್ರವಾದಿಯನ್ನು ನೀವು ಸುಳ್ಳುಗಾರ ಎನ್ನುತ್ತಿದ್ದೀರಿ. ಅದಲ್ಲದೇ ಅವರ ವಿರೋಧ'ಕ್ಕೆ ಇನ್ನೊಂದು ಕಾರಣವೇನೆಂದರೆ, ಅವರು ತನ್ನ ಅಲ್ಪಬುದ್ಧಿಯಿಂದಾಗಿ ಅಥವಾ ಮೂರ್ಖತನದಿಂದಾಗಿ, ಬನಿಈಸ್ರಾಯಿಲದಿಂದ ಖಾತಮನಬ್ಬಿಯೇನ್ ಬರುವರು ಎಂದು ಭಾವಿಸಿಕೊಂಡಿದ್ದರು. ಏಕೆಂದರೆ ತೋರೇತಿನಲ್ಲಿ ಬರೆಯಲಾಗಿತ್ತು. ನಿಮ್ಮ ಸಹೋದರರಲ್ಲಿ, ಅವರು ಇದರ ಇದರ ತಾತ್ಪರ್ಯ ಬನೀ ಇಸ್ರಾಯಿಲನಿಂದ ಎಂದು ತಿಳಿಸಿದ್ದರು. ಬದಲು ಅದರ ತಾತ್ಪರ್ಯ ಬನಿ ಇಸ್ಮಾಯಿಲ್ ಎಂದಾಗಿತ್ತು. ಆದ್ದರಿಂದ ಅವರು ಹಝ್ರತ್ ಪೈಗಂಬರ್(ಸ) ರು ಖಾತಮಿನ್ನವಿಮೀನ್ ಆಗಿದ್ದಾರೆ ಎಂದು ತಿಳಿದ ನಂತರ ಅವರ ಭರವಸೆಗಳ ಮೇಲೆ ನೀರೆರಬಬೇಕಾಯಿತು. ತೋರೆತಿನ ಪ್ರಕಾರ ಅವರು ಭಾವಿಸಿದ ಭವಿಷ್ಯವಾಣಿ ತಪ್ಪಾಗಿ ಹೋಯಿತು. ಅದರಿಂದ ಅವರು ಬೆಂಕಿಯಾದರು ಮತ್ತು ವಿರೋಧಕ್ಕಾಗಿ ನಿಂತುಕೊಂಡರು.
(ಮಲ್ಫುಝಾತ್, ಸಂಪುಟ–7, ಪುಟ 198–200, ಸಂಚಿಕೆ 1984)

ಒಂದು ಗ್ರಾಮದಿಂದ ಅಹ್ಮದಿಯೊಬ್ಬ ಹಝ್ರತ್ ಮಸೀಹ್ ಮೌಊದ್ (ಅ) ರ ಸನ್ನಿಧಿಯಲ್ಲಿ ಹಾಜರಾಗಿ ಹೀಗೆ ಹೇಳಿದರು. ನನ್ನ ಗ್ರಾಮದ ಮದ್ರಸಾ ಉದ್ಯೋಗಿಯಾದ ಒಬ್ಬ ಮೌಲ್ವಿ ಕಠಿಣ ವಿರೋಧಿಯಾಗಿರುವವನು ಮತ್ತು ನನಗೆ ಬಹಳ ತೊಂದರೆ ಕೊಡುತ್ತಾನೆ. ಹುಝೂರ್, ಅಲ್ಲಾಹನು ಅವನನ್ನು ಅಲ್ಲಿಂದ ಸ್ಥಳಾಂತರಗೊಳಿಸಲಿ ಎಂದು ನೀವು ದುಆ ಮಾಡಿರಿ. ಹಝ್ರತ್ ಮಸೀಹ್ ಮೌಊದ್(ಅ) ಮುಗುಳ್ನಗುತ್ತಾ ಹೇಳಿದರು. ಈ ಜಮಾಅತಿಗೆ ಪ್ರವೇಶಿಸಿದಾಗ ಅದರ ಪಾಠಗಳ ಪ್ರಕಾರ ನಡೆಯಿರಿ. ಕಷ್ಟತೆಗಳು ಇಲ್ಲದಿದ್ದರೆ ಪ್ರತಿಫಲ ಹೇಗೆ ಲಭಿಸುವುದು? ಲ್ಲಾಹನ ಪೈಗಂಬರ್(ಸ) ಹದಿಮೂರು ವರ್ಷಗಳ ಕಾಲ ದುಃಖವನ್ನು ಅನುಭವಿಸಿದರು. ಆದರೆ ಸಹಾಬಿಯರೊಡನೆ ಸಹನೆದೋರಲು ಉಪದೇಶಿಸಿದರು. ಅಲ್ಲಾಹನ ಪರಿಶುದ್ಧ ಜಮಾಅತ್ ಲೋಕದಲ್ಲಿ ಹರಡಲು ಅಲ್ಲಾಹನು ಉದ್ದೇಶಿಸಿದ್ದಾನೆ. ಅಲ್ಲಾಹನು ನಿಮಗೆ ವಿರೋಧಿಗಳ ಮೂಲಕ ಸಹನೆಯ ಪಾಠವನ್ನು ಕಲಿಸಲು ಬಯಸುತ್ತಾನೆ. ಇದು ಏನೂ ಅಲ್ಲವೆಂದು. ಸ್ವಲ್ಪ ಕಾಲದ ಸಹನೆಯ ನಂತರ ನೋಡುವಿರಿ, ದುಃಖ ನೀಡುವವನು ಪಶ್ಚಾತ್ತಾಪಪಡುವವನು. ಅಥವಾ ನಾಶಹೊಂದುವನು. ಸಹನೆದೋರುವವನಿಗೆ ಲೆಕ್ಕವಿಲ್ಲದಷ್ಟು ಪ್ರತಿಫಲ ಲಭಿಸುವುದು ಎಂದು ಅಲ್ಲಾಹನು ಹೇಳುತ್ತಾನೆ. ಈ ಪ್ರತಿಫಲ ಕೇವಲ ಸಹನೆದೋರುವವರಿಗೆಯೇ ಆಗಿದೆ. ಬೇರೆ ಆರಾಧನೆಗಳಿಗೆ ಅಲ್ಲಾಹನ ಈ ವಾಗ್ದಾನವಿರುವುದಿಲ್ಲ. ವ್ಯಕ್ತಿಯೊಬ್ಬನು ತಮ್ಮ ಮಿತ್ರನೊಬ್ಬ ಭರವಸೆಯಲ್ಲಿ ಜೀವನ ಕಳೆಯುವವರಾದರೆ, ಅವನಿಗೆ ಏನಾದರೂ ದು:ಖ ಎದುರಾದರೆ ಅವನ ಮಿತ್ರನಿಗೆ ಸಹಕಾರ ನೀಡಲು ಉತ್ತೇಜ ದೊರೆಯುತ್ತದೆ. ಅವನು ದು:ಖ ನೀಡುವವನಿಗೆ ನಾಶಗೊಳಿಸುತ್ತಾನೆ. ಅದೇ ರೀತಿ ನಮ್ಮ ಜಮಾಅತ್ ಪರವಾಗಿ ಅಲಾಹನಿದ್ದಾನೆ. ದುಃಖದ ಮೇಲೆ ಸಹನೆ ತಿಳಿದರೆ ನಂಬಿಕೆಯು ದೃಢವಾಗುತ್ತದೆ. ಸಹನೆಯಂತೆ ಇನ್ನೊಂದು ವಸ್ತು ದೊರೆಯುವುದಿಲ್ಲ. (ಮಲ್ಫುಝಾತ್, ಸಂಪುಟ–4, ಪುಟ–234–235, 1984)

ಇನ್ನೊಂದು ಸಂದರ್ಭದಲ್ಲಿ ಕೆಲ ಜನರು ಬೈಅತ್ ಮಾಡುವ ಉದ್ದೇಶದಿಂದ ಖಾದಿಯಾನಿಗೆ ಬಂದಿದ್ದರು. ಅವರನ್ನು ಉಪದೇಶ ನೀಡುತ್ತಾ ಮಸೀಹ್ ಮೌಊದ್ (ಅ) ಹೇಳಿದರು. ಲೌಕಿಕ ಜನರು ಲೌಕಿಕ ವಸ್ತುಗಳ ಮೇಲೆ ಭರವಸೆ ಇರಿಸುತ್ತಾರೆ. ಆದರೆ ಅಲ್ಲಾಹನು ಯಾವುದೇ ಒತ್ತಡಕ್ಕೆ ಸಿಲುಕಿಕೊಂಡವನಲ್ಲ. ಅಲ್ಲಾಹನು ಬಯಸಿದರೆ ಸಾಧನೆಯಿಲ್ಲದೆ ಕಾರ್ಯಸಾಧಿಸಿಕೊಡಬಹುದಾಗಿದೆ. ಕೆಲವೊಮ್ಮೆ ಸಿದ್ಧಗೊಂಡ ಕಾರ್ಯಗಳೆಲ್ಲ ವಿಫಲಗೊಳ್ಳುತ್ತವೆ. ಒಟ್ಟಿನಲ್ಲಿ ತಮ್ಮ ಕೃತ್ಯಗಳನ್ನು ಪರಿಶುದ್ಧಗೊಳಿಸಿರಿ. ಅಸಡ್ಡೆ ತೋರಿಸಬೇಡಿರಿ. ಅಸಡ್ಡೆ ತೋರಿಸುವವನು ಶೈತಾನನಿಗೆ ಬಲಿಯಾಗುತ್ತಾನೆ. ಪಶ್ಚಾತ್ತಾಪ ಮಾಡುವುದನ್ನು ಸದಾ ಜೀವಂತವಾಗಿ ಇರಿಸಿರಿ. ಅದು ವ್ಯರ್ಥವಾಗದಿರಲಿ. ಪಶ್ಚಾತ್ತಾಪವಿಲ್ಲದೆ ಜೀವಿಸಬೇಡಿರಿ. ಸದಾ ಪಶ್ಚಾತ್ತಾಪ ಮಾಡುತ್ತೀರಿ. ಏಕೆಂದರೆ ಯಾವ ಅಂಗವನ್ನು ನಾವು ಉಪಯೋಗಕ್ಕೆ ತರುತ್ತೇವೆ. ಅದೇ ಕೆಲಸಕ್ಕೆ ಸಿದ್ಧವಾಗಿರುತ್ತದೆ, ಯಾವುದನ್ನು ಉಪಯೋಗಕ್ಕೆ ತರುವುದಿಲ್ಲ. ಅದು ವ್ಯರ್ಥವಾಗುತ್ತದೆ. ಅದೇ ರೀತಿ ಪಶ್ಚಾತ್ತಾಪವನ್ನು ಮಾಡುತ್ತಿರಿ, ಅದು ವ್ಯರ್ಥವಾಗುವುದಿಲ್ಲ.

ನೀವು ನಿಜವಾದ ರೀತಿಯಲ್ಲಿ ಪಶ್ಚಾತ್ತಾಪ ನಿಜವಾಗಿದ್ದರೆ ಉತ್ತಮ ಬೀಜದ ಹಾಗೆ ಆಗಿರುತ್ತದೆ. ಅದು ಸರಿಯಾದ ಸಮಯದಲ್ಲಿ ಫಲವನ್ನು ನೀಡುತ್ತದೆ.

ಇಂದಿನ ಅವಸ್ಥೆಯಲ್ಲಿ ಪಶ್ಚಾತ್ತಾಪ ಪಡುವುದರಲ್ಲಿ ಹಲವು ಕಷ್ಟಗಳಿವೆ. ಹೊಸದಾಗಿ ಬೈಅತ್ ಮಾಡುವವರನ್ನು ಸಂಬೋಧಿಸಿ ಹೇಳಿದರು. ಇಲ್ಲಿಂದ ಹೋಗಿ ನಿಮಗೆ ಬಹಳಷ್ಟು ಅನಿಷ್ಠಗಳು ಕೇಳಬೇಕಾಗಬಹುದು. ಜನರು ನಿಮ್ಮ ಕುರಿತು ಏನೇನೆಲ್ಲ ಹೇಳುವರು. ನೀವು ಒಬ್ಬ ಹುಚ್ಚ, ಕಾಫಿರ್, ದಜ್ಜಾಲ್ ಇತ್ಯಾದಿಯ ಬೈಅತ್ ಮಾಡಿರುವಿರಿ. ಹಝ್ರತ್ ಮಸೀಹ್ ಮೌಊದ್(ಅ) ಅವರನ್ನು ಬೈಯ್ಯುವವರು ಹೀಗೆ ಹೇಳುವವರ ಮೇಲೆ ಆವೇಶ ತೋರಿಸಬಾರದು. ಖಂಡಿತ ತೋರಿಸಬಾರದು. ನಾನು ಅಲ್ಲಾಹನ ಕಡೆಯಿಂದ ಸಹನೆದೋರಿಸಲು ಕಳುಹಿಸಲ್ಪಟ್ಟಿದ್ದೇನೆ. ಆದ್ದರಿಂದ ಈ ಮಾತುಗಳನ್ನು ಸಹಾ ನೆನಪಿಡಬೇಕು. ಹೇಳಿದರು ನೀವು ಅವರಿಗಾಗಿ ದುಆ ಮಾಡಿರಿ. ಅಲ್ಲಾಹನು ಅವರಿಗೆ ಸನ್ಮಾರ್ಗ ನೀಡಲಿ. ಹಝ್ರತ್ ಮಸೀಹ್ ಮೌಊದ್ (ಅ) ಸಹನೆದೋರಿಸುವ ಸಲುವಾಗಿಯೇ ನಿಯುಕ್ತಗೊಂಡಿರುವರು. ಅವರ(ಅ) ಹೆಜ್ಜೆ ಗುರತನ್ನು ಹಿಂಬಾಲಿಸುವುದರಲ್ಲೇ ನಮ್ಮ ಯಶಸ್ಸು ಇರುವುದು.

ಹೇಳಿದರು: .......ಇಸ್ತಿಗ್‌ಫಾರ್, ತೌಬ ನಮ್ಮ ವಿಜಯಿಯಾಗುವ ಆಯುಧಗಳಾಗಿವೆ. ಪ್ರತೀಕಾರವಲ್ಲ, ಇಸ್ತಿಗ್‌ಭಾರ್, ತೌಬ, ಧಾರ್ಮಿಕ ಜ್ಞಾನ, ಅಲ್ಲಾಹನ ಗೌರವವನ್ನು ದೃಷ್ಟಿಯಲ್ಲಿರಿಸಿಕೊಳ್ಳುವುದು ಮತ್ತು ಐದು ಹೊತ್ತಿನ ನಮಾಝುಗಳನ್ನು ನಿರ್ವಹಿಸುವುದು, ಇವುಗಳು ನಾವು ವಿಜಯ ಸಾಧಿಸಲು ಬೇಕಾದ ಆಯುಧಗಳಾಗಿವೆ.

ನಮಾಝ್ ದುಆ ಸ್ವೀಕೃತವಾಗಲು ಕೀಲಿಗೈ ಇದ್ದಂತೆ, ನೀವು ನಮಾಝ್ ಮಾಡುವುದಾದರೆ, ಆಗ ದುಆ ಮಾಡಿರಿ. ಅಸಡ್ಡೆ ತೋರಿಸಬೇಡಿ. ಪ್ರತಿಯೊಂದು ಕೆಡುಕು ಅದು ಅಲ್ಲಾಹನ ಹಕ್ಕುಗಳ ಪೈಕಿಯಾಗಿರಲಿ ಅಥವಾ ಅವನ ಸೃಷ್ಟಿಯ ಪೈಕಿಯಾಗಿರಲಿ, ಅದರಿಂದ ದೂರವಿರಿ.
(ಮಲ್ಫೂಝಾತ್, ಸಂಪುಟ–5, ಪುಟ–303, ಸಂಚಿಕೆ 1984)

ಒಟ್ಟಿನಲ್ಲಿ ನಮ್ಮ ವಿಜಯ ಮತ್ತು ಪ್ರಗತಿಯ ಬುನಾದಿ ಈ ಉಪದೇಶಗಳಾಗಿವೆ. ಹಝ್ರತ್ ಮಸೀಹ್ ಮೌಊದ್(ಅ) ಅವರ ನಿರ್ದೇಶನದ ಪ್ರಕಾರ ನಾವು ಸರಿಯಾದ ರೀತಿಯಲ್ಲಿ ಇಸ್ತಿಗ್‌ಫಾರ್, ತೌಬ, ಧಾರ್ಮಿಕ ಜ್ಞಾನ ಮತ್ತು ಐದು ಹೊತ್ತು ನಮಾಝುಗಳನ್ನು ನಿರ್ವಹಿಸುವ ಕಡೆ ಗಮನಹರಿಸುವವರಾದರೆ, ಅದರಲ್ಲೇ ನಮ್ಮ ವಿಜಯವಿದೆ. ಅದಕ್ಕಾಗಿಯೇ ಹಝ್ರತ್ ಮಸೀಹ್ ಮೌಊದ್ (ಅ) ಪದೇ ಪದೇ ಉಪದೇಶ ನೀಡಿದರೇ ಹೊರತು ಯಾವುದೇ ರೀತಿಯ ಪ್ರತೀಕಾರ ಭಾವನೆ ವ್ಯಕ್ತಪಡಿಸಲು ಅಲ್ಲ. ಹಝ್ರತ್ ಮಸೀಹ್ ಮೌಊದ್ (ಅ) ಹೇಳಿದ ಪ್ರಕಾರ ನಮ್ಮ ವಿಜಯ ವಿಧಿಸಲ್ಪಟ್ಟಿದ್ದಾಗಿದೆ. ಇನ್‌ಶಾಅಲ್ಲಾಹ್.

ಹೌದು, ಈ ಮಾತನ್ನು ನೆನಪಿಡಬೇಕಾಗಿದೆ ಪ್ರತಿಯೊಬ್ಬ ಅಹ್ಮದಿ ತನ್ನ ಹೊಣೆಗಾರಿಕೆಯನ್ನು ಅರಿತು ಅನೇಕ ಸಮಸ್ಯೆಗಳನ್ನು ನಮ್ಮ ವರ್ತನೆಗಳ ಮತ್ತು ದುಆಗಳ ಮೂಲಕ ಬಗೆಹರಿಸಬಹುದಾಗಿದೆ.

ಅಲ್ಲಾಹನು ನಮಗೆ ಸಹನೆ, ತಾಳ್ಮೆ ಮತ್ತು ದುಆಗಳನ್ನು ಮಾಡಲು ಸೌಭಾಗ್ಯ ನೀಡಲಿ ಹಾಗೂ ಅವನ ಸಂಪ್ರೀತಿಯನ್ನು ಗಳಿಸಲಿಕ್ಕಾಗಿ ಈ ಮಾತುಗಳ ಪ್ರಕಾರ ನಡೆಯಲು ಸೌಭಾಗ್ಯವನ್ನು ದಯಪಾಲಿಸಲಿ. ಆಮೀನ್.

## ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ರಕ್ಷಿಸಿರಿ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಕಾಲದ ಸ್ಮರಣೀಯ ಪತ್ರಿಕೆ. **"ಅಖ್ಬಾರ್ ಬದರ್"** 1952 ರಿಂದ ಸತತವಾಗಿ ಖಾದಿಯಾನ್ ದಾರುಲ್‌ಅಮಾನಿನಿಂದ ಪ್ರಕಟಗೊಳ್ಳುತ್ತಿದೆ ಮತ್ತು ಅಹ್ಮದೀಯರ ಆಧ್ಯಾತ್ಮಿಕ ಅವಶ್ಯಕತೆಗಳನ್ನು ಪೂರೈಸುತ್ತಿದೆ. ಇದರಲ್ಲಿ ಪವಿತ್ರ ಖುರ್‌ಆನಿನ ಆಯತ್‌ಗಳು, ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರ ಹದೀಸ್‌ಗಳು, ಹಝ್ರತ್ ಮಸೀಹ್ ಮೌಊದ್(ಅ)ರ ಮಲ್‌ಫೂಝಾತ್ ಮತ್ತು ಬರವಣಿಗೆಗಳಲ್ಲದೆ ಹುಝೂರ್ ಅನ್ವರ್(ಅತಬಅ)ರವರ ಹೊಸ ಖುತ್‌ಬ ಜುಮುಆ, ಉಪನ್ಯಾಸಗಳು, ಸಂದೇಶಗಳು, ಖುತ್‌ಬ ಜುಮುಆ ಪ್ರಶ್ನೋತ್ತರದ ರೂಪದಲ್ಲಿ ಮತ್ತು ಹುಝೂರ್ ಅನ್ವರ್‌ರವರ ಪ್ರವಾಸದ ವರದಿಗಳು, ಅದೇ ರೀತಿ ಆಧ್ಯಾತ್ಮಿಕ ಮತ್ತು ಲೌಕಿಕ ಜ್ಞಾನಗಳ ಸಂಪತ್‌ಭರಿತ ವರದಿಗಳು ಇರುತ್ತದೆ. ಅವುಗಳನ್ನು ಅಧ್ಯಯನ ಮಾಡುವುದು, ಅವುಗಳನ್ನು ಅನ್ಯರಿಗೆ ತಲುಪಿಸುವುದು ಮತ್ತು ಅದರಿಂದ ತಮ್ಮ ಮತ್ತು ತಮ್ಮ ಮಕ್ಕಳ, ಕುಟುಂಬದವರ ತರಬೇತಿ ಮಾಡುವುದು ನಮ್ಮ ಕರ್ತವ್ಯವಾಗಿದೆ. ಈ ಎಲ್ಲಾ ಉದ್ದೇಶಗಳನ್ನು ಪಡೆಯುವುದಕ್ಕೆ ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ಕಾಪಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಆಧ್ಯಾತ್ಮಿಕ ಜ್ಞಾನ ಮತ್ತು ತರಬೇತಿಯನ್ನೂ ಒಳಗೊಂಡಿರುವ ಈ ಪವಿತ್ರವಾದ ಪತ್ರಿಕೆಯ ಅವಶ್ಯಕತೆ ಏನೆಂದರೆ ಅದನ್ನು ಗೌರವಿಸಬೇಕು. ಆದ್ದರಿಂದ ಇದನ್ನು ರದ್ದಿಗೆ ಹಾಕುವುದು ಅದರ ಪಾವಿತ್ರ್ಯತೆಯನ್ನು ಚದುರಿಸುವ ಸಮಾನವಾಗಿದೆ. ಅದನ್ನು ರಕ್ಷಿಸಲು ಕಷ್ಟವಾಗುತ್ತಿದ್ದರೆ ಅದನ್ನು ಎಚ್ಚರಿಕೆಯಿಂದ ನಾಶಮಾಡಿರಿ. ಏಕೆಂದರೆ ಹೀಗೆ ಆ ಪವಿತ್ರ ಬರಹಗಳು ಅವಮಾನವಾಗಬಾರದು. ಅಹ್ಮದಿ ಸದಸ್ಯರೆಲ್ಲರೂ ಈ ಬಗ್ಗೆ ವಿಶೇಷ ಗಮನ ಹರಿಸುತ್ತೀರ ಮತ್ತು ಇದರಿಂದ ಉಪಯೋಗ ಗಳಿಸುವಿರೀ ಎಂದು ಆಶಿಸುತ್ತೇವೆ. **(ಸಂಪಾದಕರು)**

ವಾಸ್ತವವಾಗಿ, ನೀವು ಸುಸಂಸ್ಕೃತ ಜನರಾಗಿದ್ದೀರಿ, ನಾಸ್ತಿಕರು ಅಥವಾ ಯಾವುದೇ ಧರ್ಮವನ್ನು ನಂಬದವರಲ್ಲ ನಿವು ಸ್ವತಃ ನಿಮ್ಮನ್ನು ಕೀಳಾಗಿ ಭಾವಿಸುವ ಅಗತ್ಯವಿಲ್ಲ

ನೀವು ನಿಮ್ಮನ್ನು, ನಿಮ್ಮ ಶಿರವನ್ನು, ನಿಮ್ಮ ಗಲ್ಲವನ್ನು ಮತ್ತು ನಿಮ್ಮ ಎದೆಭಾಗವನ್ನು ಮುಚ್ಚಿಕೊಳ್ಳಬೇಕು ಮತ್ತು ಸರಳವಾದ ಬಟ್ಟೆಗಳನ್ನು ಧರಿಸಬೇಕು.

ಇದು ಇಸ್ಲಾಮಿಕ್ ಉಡುಗೆಯಾಗಿದೆ ಎಂದು ಜನರಿಗೆ ತಿಳಿಸಿಕೊಡಿ ಮತ್ತು ಪವಿತ್ರ ಖುರ್‌ಆನ್‌ನಲ್ಲಿ ಮುಸ್ಲಿಂ ಮಹಿಳೆಯರಿಗೆ ಈ ಆದೇಶವನ್ನು ನೀಡಲಾಗಿದೆ, ಆದ್ದರಿಂದ ನಾವು ಈ ಉಡುಪನ್ನು ಧರಿಸುತ್ತೇವೆ ಮತ್ತು ನಾವು ಅಲ್ಲಾಹನ ಆದೇಶವನ್ನು ಅನುಸರಿಸುತ್ತೇವೆ ಎಂದು ಹೇಳಿಕೊಡಿ.

ಆತ್ಮವಿಶ್ವಾಸವನ್ನು ಬೆಳೆಸಿಕೊಳ್ಳಿ ಮತ್ತು ಎಂದಿಗೂ ಆತ್ಮವಿಶ್ವಾಸವನ್ನು ಕಳೆದುಕೊಳ್ಳಬೇಡಿ

ಅಹ್ಮದಿ ಮುಸ್ಲಿಂ ಹುಡುಗಿಯರಲ್ಲಿ ನಮಗೆ ಹೆಚ್ಚು ವೈದ್ಯರು, ಹೆಚ್ಚಿನ ಶಿಕ್ಷಕರು ಬೇಕು ಮತ್ತು ನೀವು ವಿಜ್ಞಾನ ವಿಷಯಗಳಲ್ಲಿ ಉತ್ತಮರಾಗಿದ್ದರೆ, ನಂತರ ವೈದ್ಯಕೀಯ ಅಥವಾ ಶಸ್ತ್ರಚಿಕಿತ್ಸಕರಾಗಿ.

ನೀವು ಯಾವುದೇ ಸಮಸ್ಯೆಯನ್ನು ಎದುರಿಸಿದಾಗ, ನಿಮ್ಮ ಪ್ರಾರ್ಥನೆಯಲ್ಲಿ ಸ್ಥಿರತೆಯೊಂದಿಗೆ ನೀವು ಅಲ್ಲಾಹನನ್ನು ಪ್ರಾರ್ಥಿಸಬೇಕು.

ನಿಮ್ಮೆಲ್ಲರಿಗೂ ನನ್ನ ಸಲಹೆಯೆಂದರೆ ನಿಮ್ಮ ಅಧ್ಯಯನದಲ್ಲಿ ಪ್ರಗತಿ ಸಾಧಿಸಲು ಶ್ರಮಿಸಬೇಕು ಇದರಿಂದ ನೀವು ಸಾಧ್ಯವಾದಷ್ಟು ಕಲಿಯಬಹುದು

## ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್(ಅತಬಿಅ), ಅವರೊಂದಿಗೆ ನೈಜೀರಿಯಾದ ನಾಸಿರಾತುಲ್ ಅಹ್ಮದಿಯಾದ ಆನ್‌ಲೈನ್ ಸಭೆ ಮತ್ತು ಹುಝೂರ್(ಅತಬಿಅ)ರವರ ಅತ್ಯುತ್ತಮ ಸಲಹೆ ಸೂಚನೆಗಳು.

ಸೆಪ್ಟೆಂಬರ್ 25, 2021 ರಂದು, ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್(ಅತಬಿಅ), ಅವರು 9 ರಿಂದ 14ವರ್ಷ ವಯಸ್ಸಿನ ನೈಜೀರಿಯಾದ ನಾಸಿರಾತುಲ್ ಅಹ್ಮದಿಯಾದ ಸದಸ್ಯರನ್ನು ಆನ್‌ಲೈನ್ ಮುಖಾಂತರ ಭೇಟಿಯಾದರು. ಹುಝೂರ್ ಅನ್ವರ್(ಅತಬಿಅ) ಅವರು ಇಸ್ಲಾಮಾಬಾದ್ (ಟಿಲ್ಫೋರ್ಡ್) ನಲ್ಲಿರುವ ಒಖಿಂ ಸ್ಟುಡಿಯೋದಲ್ಲಿ ಪ್ರದರ್ಶನ ನೀಡಿದರು, ನಾಸಿರಾತುಲ್ ಅಹ್ಮದಿಯಾ ಸದಸ್ಯರು ಲಾಗೋಸ್ (ನೈಜೀರಿಯಾ) ನ ಲಜ್ನಾ ಹಾಲ್ ಅಜುಕುರುದಿಂದ ಆನ್‌ಲೈನ್‌ನಲ್ಲಿ ಭಾಗವಹಿಸಿದರು.

ಭೇಟಿಯು ಪವಿತ್ರ ಖುರ್‌ಆನ್‌ನ ಪಠಣದೊಂದಿಗೆ ಪ್ರಾರಂಭವಾಯಿತು. ಭೇಟಿಯಲ್ಲಿ ನಾಸಿರಾತುಲ್–ಅಹ್ಮದಿಯಾ ಸದಸ್ಯರು ತಮ್ಮ ನಂಬಿಕೆಗಳು, ಬೋಧನೆಗಳು ಮತ್ತು ಪ್ರಸ್ತುತ ಯುಗಕ್ಕೆ ಸಂಬಂಧಿಸಿದ ಸಮಸ್ಯೆಗಳು ಮತ್ತು ಇತರ ಪ್ರಶ್ನೆಗಳ ಬಗ್ಗೆ ಹುಝೂರ್ ಅನ್ವರ್(ಅತಬಿಅ) ಅವರನ್ನು ಕೇಳುವ ಸೌಭಾಗ್ಯ ಪಡೆದರು.

ಧರ್ಮ ಮತ್ತು ಇಂದಿನ ನಾಗರಿಕತೆಯ ನಡುವೆ ಏನಾದರೂ ವಿರೋಧಾಭಾಸವಿದೆಯೇ ಎಂಬ ಪ್ರಶ್ನೆಗೆ ಉತ್ತರಿಸಿದ ಹುಝೂರ್ ಅನ್ವರ್(ಅತಬಿಅ), ಧರ್ಮವು ನಿಮ್ಮನ್ನು ನಾಗರಿಕತೆಯಿಂದ ದೂರ ಮಾಡುತ್ತದೆ ಎಂದು ಹೇಳುವವರು ತಪ್ಪು ಎಂದು ಹೇಳುತ್ತಾರೆ. ಮತ್ತು ನಾವು ಉತ್ತಮವಾಗಿದ್ದೇವೆ. ವಾಸ್ತವವಾಗಿ, ಧರ್ಮವು ಜಗತ್ತಿಗೆ ನಾಗರಿಕತೆಯನ್ನು ತಂದಿದೆ. ಅಂತಹ ಆಕ್ಷೇಪಾರ್ಹ ಜನರು ಸ್ವತಃ ಯಾವುದೇ ಪ್ರವಾದಿ ಬರದಿದ್ದರೆ, ಜಗತ್ತಿನಲ್ಲಿ ಯಾವುದೇ ನಾಗರಿಕತೆ ಹುಟ್ಟುತ್ತಿರಲಿಲ್ಲ ಎಂದು ನಂಬಿರುತ್ತಾರೆ. ಒಂದು ಕಡೆ ಧರ್ಮವು ನಾಗರಿಕತೆಯನ್ನು ತರುತ್ತದೆ ಎಂದು ಹೇಳುತ್ತಾರೆ ಮತ್ತು ಇನ್ನೊಂದು ಕಡೆ ನೀವು ಧರ್ಮವನ್ನು ಅನುಸರಿಸಬಾರದು ಎಂದು ಹೇಳುತ್ತಾರೆ ಏಕೆಂದರೆ ಅದು ನಿಮ್ಮನ್ನು ಇಂದಿನ ಆಧುನಿಕ ನಾಗರಿಕತೆಯಿಂದ ದೂರವಿಡುತ್ತಿದೆ. ಮತ್ತು ಇಂದಿನ ಆಧುನಿಕ ನಾಗರಿಕತೆಯು ಅನೈತಿಕತೆಯಲ್ಲದೆ ಬೇರೇನೂ ಅಲ್ಲ. ಮತ್ತು ಎಲ್ಲವೂ ಸ್ವಾತಂತ್ರ್ಯದ ಹೆಸರಿನಲ್ಲಿದೆ ಅದು ನಿಮಗೆ ಒಳ್ಳೆಯದನ್ನು ನೀಡುವುದಿಲ್ಲ ಆದರೆ ನಿಮ್ಮ ಜೀವನವನ್ನು ಹಾಳುಮಾಡುತ್ತದೆ. ಹಾಗಾಗಿ ಇಂಥವರಿಗೆ ಭಯಪಡುವ ಅಗತ್ಯವಿಲ್ಲ. ನೀವು ಧರ್ಮವನ್ನು ಆಚರಿಸುವ ಸುಸಂಸ್ಕೃತ ಜನರಾಗಿದ್ದೀರಿ. ಮತ್ತು ಪವಿತ್ರ ಖುರ್‌ಆನ್‌ನ ಬೋಧನೆಗಳನ್ನು ಅನುಸರಿಸುವವರಾಗಿದ್ದೀರಿ. ನಂತರ ಮುಸ್ಲಿಮರಾಗಿ ನೀವು ಪವಿತ್ರ ಖುರ್‌ಆನ್‌ನ ಬೋಧನೆಗಳನ್ನು ಸಹ ಅನುಸರಿಸಬೇಕು. ಮತ್ತು ನೀವು ಅನುಸರಿಸಬೇಕಾದ ಪವಿತ್ರ ಖುರ್‌ಆನ್‌ನಲ್ಲಿ ನಿಮಗೆ ಯಾವ ಆಜ್ಞೆಗಳನ್ನು ನೀಡಲಾಗಿದೆ ಎಂಬುದನ್ನು ನೀವು ಕಂಡುಹಿಡಿಯಬೇಕು. ವಾಸ್ತವವಾಗಿ, ನೀವು ಸುಸಂಸ್ಕೃತ ಜನರಾಗಿದ್ದೀರಿ, ನಾಸ್ತಿಕರು ಅಥವಾ ಯಾವುದೇ ಧರ್ಮವನ್ನು ನಂಬದವರಲ್ಲ. ನೀವು ನಿಮ್ಮನ್ನು ಸ್ವತಃ ಕೀಳಾಗಿ ಭಾವಿಸುವ ಅಗತ್ಯವಿಲ್ಲ.

ಮುಸ್ಲಿಮೇತರರ ಭಯದಿಂದ ಅಥವಾ ಅಪಹಾಸ್ಯಕ್ಕೊಳಗಾಗುವುದರಿಂದ ಟೀಕೆಗಳಿಂದಾಗಿ ಕೆಲವು ಮುಸ್ಲಿಂ ಹುಡುಗಿಯರು ಅಥವಾ ಮಹಿಳೆಯರು ಹಿಜಾಬ್ ಧರಿಸಲು ಹಿಂಜರಿಯುತ್ತಾರೆ ಎಂದು ಹುಡುಗಿಯೊಬ್ಬಳು ಕೇಳಿದಳು. ಅಂತಹ ವಿರೋಧದ ನಡುವೆಯೂ ಇಸ್ಲಾಮಿಕ್ ಬೋಧನೆಗಳನ್ನು ಹೇಗೆ ಅನುಸರಿಸಬಹುದು ಎಂಬುದಕ್ಕೆ ಅವಳು ಹುಝೂರ್ ಅನ್ವರ್(ಅತಬಿಅ) ಅವರಿಂದ ಮಾರ್ಗದರ್ಶನವನ್ನು ಕೋರಿದಳು.

ಹುಝೂರ್ ಅನ್ವರ್(ಅತಬಿಅ) ಅವರು ಇದಕ್ಕೆ ಉತ್ತರಿಸುತ್ತ ಹೇಳಿದರು: ಇದು ಇಸ್ಲಾಮಿಕ್ ಉಡುಗೆಯಾಗಿದೆ ಮತ್ತು ಪವಿತ್ರ ಖುರ್‌ಆನ್‌ನಲ್ಲಿ ಮುಸ್ಲಿಂ ಮಹಿಳೆಯರಿಗೆ ಈ ಆದೇಶ ನೀಡಲಾಗಿದೆ ಎಂದು ಆತ್ಮಸ್ಥೈರ್ಯ ಬೆಳೆಸಿಕೊಳ್ಳಲು ಜನರಿಗೆ ತಿಳಿಸಿಕೊಡಿ. ಸರ್ವಶಕ್ತನಾದ ಅಲ್ಲಾಹನು ಹೇಳುವಂತೆ ಮಹಿಳೆಯರು ತಮ್ಮನ್ನು, ತಮ್ಮ ತಲೆ, ಗಲ್ಲ, ಮತ್ತು ಎದೆಭಾಗವನ್ನು ಮುಚ್ಚಿಕೊಳ್ಳಬೇಕು ಮತ್ತು ಸಡಿಲುವಸ್ತ್ರ ಮತ್ತು ಸರಳವಾದ ಬಟ್ಟೆಗಳನ್ನು ಧರಿಸಬೇಕು. ಅದಕ್ಕಾಗಿಯೇ ನಾವು ಈ ಉಡುಪನ್ನು ಧರಿಸುತ್ತೇವೆ ಮತ್ತು ನಾವು ಸರ್ವಶಕ್ತನಾದ ಅಲ್ಲಾಹನ ಆದೇಶವನ್ನು ಅನುಸರಿಸುತ್ತೇವೆ ಮತ್ತು ಯಾವುದೇ ವ್ಯಕ್ತಿಯ ಭಯವಿಲ್ಲದೆ ನಾವು ಅದನ್ನು ಮುಂದುವರಿಸುತ್ತೇವೆ ಎಂದು ಹೇಳಿ. ಆತ್ಮಸ್ಥೈರ್ಯವನ್ನು ಬೆಳೆಸಿಕೊಳ್ಳಿ ಮತ್ತು ಎಂದಿಗೂ ಆತ್ಮವಿಶ್ವಾಸವನ್ನು ಕಳೆದುಕೊಳ್ಳಲು ಬಿಡಬೇಡಿ. ನೀವು ನಿಮ್ಮನ್ನು ಅಹ್ಮದಿ ಮುಸ್ಲಿಂ ಎಂದು ಕರೆಸಿಕೊಂಡಾಗ, ಇತರರಿಗೆ ಭಯಪಡುವ ಅಗತ್ಯವಿಲ್ಲ.

ಅಹ್ಮದಿಯಾ ಮುಸ್ಲಿಂ ಜಮಾಅತ್‌ನ ಉಪಯುಕ್ತ ಸದಸ್ಯರಾಗಲು ಉನ್ನತ ಶಿಕ್ಷಣದಲ್ಲಿ ಏನು ಓದಬೇಕು ಎಂದು ಹುಝೂರ್ ಅನ್ವರ್(ಅತಬಿಅ) ಅವರನ್ನು ಓರ್ವ ನಾಸಿರಾ ಪ್ರಶ್ನಿಸಿದರು.

ಅದಕ್ಕೆ ಹುಝೂರ್ ಅನ್ವರ್(ಅತಬಿಅ) ಹೇಳಿದರು, ಅಹ್ಮದಿ ಮುಸ್ಲಿಂ ಹೆಣ್ಣುಮಕ್ಕಳಲ್ಲಿ ನಮಗೆ ಹೆಚ್ಚಿನ ವೈದ್ಯರು, ಹೆಚ್ಚಿನ ಶಿಕ್ಷಕರು ಬೇಕು ಮತ್ತು ನೀವು ವಿಜ್ಞಾನ ವಿಷಯಗಳಲ್ಲಿ ಉತ್ತಮರಾಗಿದ್ದರೆ, ವೈದ್ಯಕೀಯ ಅಥವಾ ಶಸ್ತ್ರಚಿಕಿತ್ಸಕರಾಗಿ. ನಮಗೆ ನಮ್ಮ ಶಾಲೆಗಳಿಗೆ ಶಿಕ್ಷಕರು ಮತ್ತು ನಮ್ಮ ಆಸ್ಪತ್ರೆಗಳಿಗೆ ವೈದ್ಯರು ಬೇಕಾಗಿದ್ದಾರೆ. ಅಲ್ಲದೆ, ನಿಮಗೆ ನಿರ್ದಿಷ್ಟ ವಿಷಯದಲ್ಲಿ ಆಸಕ್ತಿ ಇದ್ದರೆ, ನನಗೆ ಬರೆಯಿರಿ ಮತ್ತು ಅದೇ ವಿಷಯವನ್ನು ಅಥವಾ ನಿಮಗೆ ಆಸಕ್ತಿಯಿರುವ ಮತ್ತು ಇಡೀ ಜಮಾಅತ್‌ಗೆ ಉಪಯುಕ್ತವಾದ ಪರ್ಯಾಯ ವಿಷಯವನ್ನು ಅಧ್ಯಯನ ಮಾಡಲು ನಾನು ನಿಮಗೆ ಹೇಳುತ್ತೇನೆ.

ಹುಝೂರ್ ಅನ್ವರ್(ಅತಬಿಅ) ಅವರು ಆಫ್ರಿಕಾದಲ್ಲಿದ್ದಾಗ ದುಆ ಸ್ವೀಕಾರ ಕುರಿತು ಯಾವುದೇ ಘಟನೆಯನ್ನು ಹೇಳಬಹುದೇ ಎಂದು ಇನ್ನೊರ್ವ ನಾಸಿರಾ ಕೇಳಿದರು.

ಇದಕ್ಕೆ ಉತ್ತರಿಸುತ್ತಾ ಹುಝೂರ್ ಅನ್ವರ್(ಅತಬಿಅ) ಹೇಳೀದರು: ಹಲವಾರು ಘಟನೆಗಳಿವೆ. ಒಮ್ಮೆ ನಮ್ಮ ಬಳಿ ಹಾಲು ಇರಲಿಲ್ಲ ಮತ್ತು ನಮ್ಮ ಮಕ್ಕಳು ಚಿಕ್ಕವರಾಗಿದ್ದರು, ನಾವು ದುಆ ಮಾಡಿದೆವು. ಸರ್ವಶಕ್ತನಾದ ಅಲ್ಲಾಹನು ನಮ್ಮ ಪ್ರಾರ್ಥನೆಯನ್ನು ಸ್ವೀಕರಿಸಿದನು ಮತ್ತು ಸ್ವಲ್ಪ ಸಮಯದ ನಂತರವೇ ಸ್ನೇಹಿತರೊಬ್ಬರು ಖಜಜಚಿಟ ಹಾಲಿನ ಪೆಟ್ಟಿಗೆಯನ್ನು ತಂದುಕೊಟ್ಟರು. ಆ ಸಮಯದಲ್ಲಿ ಖಜಜಚಿಟ ಹಾಲು ಮಾತ್ರ ಸಿಗುತ್ತಿತ್ತು. ಇವತ್ತು ಸಿಗುತ್ತೋ ಇಲ್ಲವೋ ಗೊತ್ತಿಲ್ಲ. ಹೀಗೆ ಒಂದರಿಂದ ಎರಡು ಗಂಟೆಯೊಳಗೆ ನಮ್ಮ ಪ್ರಾರ್ಥನೆಯನ್ನು ಸ್ವೀಕರಿಸಲಾಯಿತು. ನನ್ನ ಮತ್ತು ನನ್ನ ಪತ್ನಿಯ ಪ್ರಾರ್ಥನೆಯನ್ನು ಸ್ವೀಕರಿಸಲಾಗಿದೆ. ಎರಡೆರಡು ದಿನಕ್ಕಷ್ಟೇ ಅಲ್ಲ ಒಂದು ತಿಂಗಳಿಗಾಗುವಷ್ಟು ಹಾಲಿನ ವ್ಯವಸ್ಥೆ ಮಾಡಿದ್ದರಿಂದ ಇಬ್ಬರಿಗೂ ಖುಷಿಯಾಯಿತು. ಈ ರೀತಿಯಾಗಿ ಸರ್ವಶಕ್ತನಾದ ಅಲ್ಲಾಹನು ನಮ್ಮ ಪ್ರಾರ್ಥನೆಯನ್ನು ಕೇಳುತ್ತಾನೆ ಎಂದು ನಾವು ನೋಡಬಹುದು.

ಒಬ್ಬ ಮಹಿಳೆ ಅಥವಾ ಹುಡುಗಿ ಸೈನ್ಯಕ್ಕೆ ಸೇರಬಹುದೇ ಎಂದು ಇನ್ನೊಬ್ಬ ನಾಸಿರಾ ಕೇಳಿದರು. ಈ ಪ್ರಶ್ನೆಗೆ ಉತ್ತರಿಸಿದ ಹುಝೂರ್ ಅನ್ವರ್(ಅತಬಿಅ), ಸದ್ಯಕ್ಕೆ ಅದರ ಅಗತ್ಯವಿಲ್ಲ ಎಂದರು. ಒಂದು ಕಾಲವಿತ್ತು ಅಗತ್ಯವಿದ್ದಾಗ, ಮುಸ್ಲಿಂ ಮಹಿಳೆಯರು ಯುದ್ಧಗಳಲ್ಲಿ ಭಾಗವಹಿಸಿದರು ಮತ್ತು ಅವರ ಪುರುಷರನ್ನು ಬೆಂಬಲಿಸಿದರು. ಆದರೆ ಇಂದಿನ ದಿನಗಳಲ್ಲಿ ನಮ್ಮಲ್ಲಿ ಯುದ್ಧದಲ್ಲಿ ಹೋರಾಡುವ ಸಾಕಷ್ಟು ಪುರುಷರು ಇದ್ದಾರೆ, ನಂತರ ಸೈನ್ಯದ ಹುಡುಗಿಯರಿಗೆ ವಾತಾವರಣವೂ ಅನುಕೂಲಕರವಾಗಿಲ್ಲ, ಆದ್ದರಿಂದ ನಾನು ಅಹ್ಮದಿ ಹುಡುಗಿಯರನ್ನು ಸೈನ್ಯಕ್ಕೆ ಸೇರಲು ಅಥವಾ ಸೈನಿಕರಾಗಲು ಅನುಮತಿಸುವುದಿಲ್ಲ ಮತ್ತು ನೀವು ವೈದ್ಯಕೀಯ ವಿಜ್ಞಾನವನ್ನು ಅಧ್ಯಯನ ಮಾಡಿದರೆ ನೀವು ಪೂರ್ಣಗೊಳಿಸಿದರೆ ಅಥವಾ ಆಗಿದ್ದರೆ ವೈದ್ಯರೇ, ನಂತರ ನೀವು ಸೇನಾ ವೈದ್ಯಕೀಯ ದಳಕ್ಕೆ ಸೇರಬಹುದು ಮತ್ತು ಅನುಮತಿಸಬಹುದು. ಆದರೆ ಯುದ್ಧಭೂಮಿಯಲ್ಲಿ ಹೋರಾಡಿದ ಸೈನಿಕರಂತೆ ಅಲ್ಲ.

ಜಗತ್ತಿನಾದ್ಯಂತ ಅಹ್ಮದೀಯರನ್ನು ಇಮಾಮತ್ ಮಾಡುವ ಹೊರೆಯನ್ನು ನೀವು ಹೇಗೆ ಹೊತ್ತಿದ್ದೀರಿ? ಎಂದು ಇನ್ನೊಬ್ಬ ನಾಸಿರಾ ಕೇಳಿದರು. ಅಹ್ಮದಿಯರು ಪ್ರಾರ್ಥನೆಗಾಗಿ ನನಗೆ ಪತ್ರಗಳನ್ನು ಬರೆಯುತ್ತಾರೆ ಮತ್ತು ನಾನು ಅವರಿಗಾಗಿ ಪ್ರಾರ್ಥಿಸುತ್ತೇನೆ ಎಂದು ಹುಝೂರ್ ಅನ್ವರ್(ಅತಬಿಅ) ಹೇಳಿದರು. ಅವರ ಸಮಸ್ಯೆಗಳನ್ನು ಪರಿಹರಿಸಲು ಮತ್ತು ಅವರಿಗೆ ಸಹಾಯ ಮಾಡಲು ನಾನು ಅಲ್ಲಾಹನ ಸಹಾಯವನ್ನು ಕೋರುತ್ತೇನೆ. ಮತ್ತು ನಾನು ಯಾವುದೇ ಒತ್ತಡವನ್ನು ಎದುರಿಸಿದಾಗ, ನಾನು ಅಲ್ಲಾಹನಲ್ಲಿ ಪ್ರಾರ್ಥಿಸುತ್ತೇನೆ. ನಾನು ಅವನ ಮುಂದೆ ಬಾಗುತ್ತೇನೆ. ತದನಂತರ ಅಲ್ಲಾಹನು ನನ್ನ ಮನಸ್ಸಿಗೆ ತೃಪ್ತಿಯನ್ನು ನೀಡುತ್ತಾನೆ ಮತ್ತು ಆ ಒತ್ತಡವು ದೂರವಾಗುತ್ತದೆ. ನೀವು ಯಾವುದೇ ಸಮಸ್ಯೆಯನ್ನು ಎದುರಿಸಿದಾಗ, ನಿಮ್ಮ ಪ್ರಾರ್ಥನೆಯಲ್ಲಿ ಸ್ಥಿರತೆಯೊಂದಿಗೆ ನೀವು ಅಲ್ಲಾಹನನ್ನು ಪ್ರಾರ್ಥಿಸಬೇಕು.

ಮನೆಯಲ್ಲಿ ಪೋಷಕರು ಆಗಾಗ್ಗೆ ಜಗಳವಾಡುತ್ತಿದ್ದರೆ, ಅಂತಹ ಸಂದರ್ಭಗಳಲ್ಲಿ ಮಕ್ಕಳು ಏನು ಮಾಡಬೇಕು ಎಂದು ಹುಡುಗಿಯೊಬ್ಬಳು ಕೇಳಿದಳು. ಹುಝೂರ್ ಅನ್ವರ್(ಅತಬಿಅ) ಅದಕ್ಕೆ ಉತ್ತರ ನಿಡುತ್ತ ಹೇಳಿದರು: ಮಕ್ಕಳ ಮನಸ್ಸಿನ ಮೇಲೆ ಕೆಟ್ಟ ಪರಿಣಾಮ ಬೀರುವ ಕಾರಣ ತಮ್ಮ ತಮ್ಮೊಳಗೆ ಜಗಳವಾಡದಂತೆ ಸರ್ವಶಕ್ತನಾದ ಅಲ್ಲಾಹನು ಅವರಿಗೆ ತಿಳುವಳಿಕೆ ನೀಡಲಿ ಎಂದು ನೀವು ಮೊದಲು ಪ್ರಾರ್ಥಿಸಬೇಕು. ಮತ್ತು ಮಕ್ಕಳ ಮೇಲೆಯೂ ಅದರ ಪರಿಣಾಮ ಬೀರುತ್ತದೆ. ನಂತರ ಎರಡನೆಯದಾಗಿ ನೀವು ಯಾರೊಂದಿಗೆ ಉತ್ತಮ ಸಂಬಂಧ ಹೊಂದಿದ್ದೀರೊ ಎಂದು ನಿಮ್ಮ ತಾಯಿ ಅಥವಾ ತಂದೆಗೆ ತಿಳಿ ಹೇಳಬೇಕು, ನೀವು ಹಾಗೆ ಜಗಳವಾಡಬಾರದು. ಇದು ಇಸ್ಲಾಮಿಕ್ ಬೋಧನೆಗಳಿಗೆ ವಿರುದ್ಧವಾಗಿದೆ. ಇದು ಅಲ್ಲಾಹ್ ಮತ್ತು ರಸೂಲುಲ್ಲಾಹ್(ಸ) ಅವರ ಬೋಧನೆಗಳಿಗೆ ವಿರುದ್ಧವಾಗಿದೆ. ಒಂದೇ ವಿಷಯವೆಂದರೆ ನಿಮ್ಮ ಬಳಿ ಶಕ್ತಿ ಇಲ್ಲದಿದ್ದರೆ, ನೀವು ಅವರಿಗಾಗಿ ಪ್ರಾರ್ಥಿಸಬೇಕು. ಮತ್ತು ನೀವು ಅವರನ್ನು ತಡೆಯುವ ಶಕ್ತಿಯನ್ನು ಹೊಂದಿದ್ದರೆ, ನೀವು ಇನ್ನೂ ಅವರಿಗಾಗಿ ಪ್ರಾರ್ಥಿಸಬೇಕು. ಮತ್ತು ಎರಡನೆಯದು, ಇದು (ಜಗಳ) ನಮ್ಮ ಮನಸ್ಸಿನ ಮೇಲೆ ಕೆಟ್ಟ ಪರಿಣಾಮ ಬೀರುತ್ತಿದೆ ಎಂದು ಅವರಿಗೆ ಮೃದುವಾಗಿ ಮತ್ತು ಗೌರವದಿಂದ ಸಲಹೆ ನೀಡುವುದು. ಆದ್ದರಿಂದ ನೀವು ನಮ್ಮ ಮುಂದೆ ಜಗಳವಾಡಬಾರದು ಮತ್ತು ಕೆಲವು ಸಣ್ಣ ವಿಷಯಗಳು ಮತ್ತು ದೌರ್ಬಲ್ಯಗಳಿದ್ದು ಅವರು ಪರಸ್ಪರ ನಿರ್ಲಕ್ಷಿಸಬೇಕು.

ಈ ಭೇಟಿಯ ಕೊನೆಯಲ್ಲಿ, ಹುಝೂರ್ ಅನ್ವರ್(ಅತಬಿಅ) ಅವರು ತಮ್ಮ ಶಿಕ್ಷಣದ ಬಗ್ಗೆ ನಾಸಿರತ್ ಅವರಿಗೆ ಸಲಹೆ ನೀಡಿದರು ಮತ್ತು ನಿಮ್ಮೆಲ್ಲರಿಗೂ ನನ್ನ ಸಲಹೆಯ ನಿಮ್ಮ ಅಧ್ಯಯನದಲ್ಲಿ ಮುನ್ನಡೆಯಲು ಶ್ರಮಿಸಿ ಇದರಿಂದ ನೀವು ಹೆಚ್ಚಿನ ಶಿಕ್ಷಣವನ್ನು ಪಡೆಯಬಹುದು ಎಂದು ಹೇಳಿದರು. ಮತ್ತು ನೀವು ವೈದ್ಯಕೀಯದಲ್ಲಿ ಆಸಕ್ತಿ ಹೊಂದಿದ್ದರೆ ನಿಮ್ಮ ಶಿಕ್ಷಣವನ್ನು ಪೂರ್ಣಗೊಳಿಸಿ ನಂತರ ನೀವು ವೈದ್ಯಕೀಯ, ಎಂಜಿನಿಯರಿಂಗ್, ಕಾನೂನು, ಶಿಕ್ಷಣಕ್ಕೆ ಹೋಗಬಹುದು ಅಥವಾ ನೀವು ಸಂಶೋಧನೆಗೆ ಹೋಗಲು ಬಯಸಿದರೆ ಸಂಶೋಧನೆಗೆ ಹೋಗಬಹುದು. ನಿಮ್ಮ ಅಧ್ಯಯನದಲ್ಲಿ ಮುನ್ನಡೆಯಲು ನೀವು ಕಷ್ಟಪಟ್ಟು ಪ್ರಯತ್ನಿಸಬೇಕು. ಮತ್ತು ಸಾಧ್ಯವಾದಷ್ಟು ಶಿಕ್ಷಣ ಪಡೆಯಲು ಪ್ರಯತ್ನಿಸಬೇಕು.

ಹಾಗಾದರೆ ಸರಿ ಎಂದು ಭೇಟಿಯ ಕೊನೆಯಲ್ಲಿ ಹುಝೂರ್ ಅನ್ವರ್(ಅತಬಿಅ) ಹೇಳಿದರು. ಸಮಯ ಮುಗಿತು. ಅಲ್ಲಾಹ್ ಹಾಫೀಝ್ ಮತ್ತು ನಾಸಿರ್ ಆಗಲಿ– ಅಸ್ಸಲಾಮು ಅಲೈಕುಮ್ ವರಹ್ಮತುಲ್ಲಾಹಿ ವ ಬರಕಾತಹು. **(ಅಖ್ಬರ್ ಅಲ್–ಫಝ್ಲ್ ಇಂಟರ್ನ್ಯಾಷನಲ್ 12 ಅಕ್ಟೋಬರ್ 2021 ಗೆ ಧನ್ಯವಾದಗಳು)**

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಅರ್ಥಮಾಡಿಕೊಳ್ಳಬೇಕು ಎಂದು ಹೇಳಲಾಗಿದೆ. ಕೊರಳಿಗೆ ಅಂಟಿಸಬೇಕಾದ ಪದಗಳನ್ನು ಅವನು ತನ್ನ ಕ್ರಿಯೆಗಳ ಪರಿಣಾಮವನ್ನು ಬದುಕುವವರೆಗೂ ಅವನೊಂದಿಗಿನ ಅವನ ಸಂಬಂಧವು ಶಾಶ್ವತವಾಗಿದೆ ಎಂದು ಸೂಚಿಸಲು ಬಳಸಲಾಗುತ್ತದೆ.

ಕರ್ಮಕ್ಕೆ ಬಳಸಲಾಗುವ "ತಾಏರ್"(ಪಕ್ಷಿ) ಎಂಬ ಪದವು ಪಕ್ಷಿ ಹಾರಿಹೋದಂತೆ ಮತ್ತು ಕಾಣಿಸದಂತೆಯೇ, ಒಬ್ಬ ವ್ಯಕ್ತಿಯು ತನ್ನ ಕರ್ಮಗಳನ್ನು ಮರೆತುಬಿಡುತ್ತಾನೆ. ಆದರೆ ಇತರ ಜನರು ಸಹ ಮರೆತುಬಿಡುತ್ತಾರೆ ಎಂದು ಸೂಚಿಸುತ್ತದೆ. ಆದರೆ ಈ ಹಕ್ಕಿಯನ್ನು ವ್ಯಕ್ತಿಯ ಕೊರಳಿಗೆ ಹಗ್ಗದಿಂದ ಕಟ್ಟಲಾಗಿದೆ. ಆದ್ದರಿಂದ, ಅದು ಹಾರಿಹೋದರೂ ಮತ್ತು ನೋಡದಿದ್ದರೂ, ಮನುಷ್ಯನ ಸಂಬಂಧವು ಅದರೊಂದಿಗೆ ಮುರಿಯುವುದಿಲ್ಲ. ಒಂದು ದಿನ ಅಥವಾ ಇನ್ನೊಂದು ದಿನ, ಅದರ ಫಲಿತಾಂಶಗಳು ಕಾಣಿಸಿಕೊಳ್ಳುತ್ತಲೇ ಇರುತ್ತವೆ.

ಇನ್ನು ಕೆಲವರು ಹಕ್ಕಿಯ ಪಾದಗಳಿಗೆ ಉದ್ದವಾದ ಹಗ್ಗವನ್ನು ಕಟ್ಟಿ ಅದನ್ನು ಬಿಡಿಸಿದರೆ ಅದು ಹಗ್ಗದ ಮಿತಿಗೆ ಹಾರುತ್ತದೆ ಎಂದು ಹೇಳಿದ್ದಾರೆ. ಅದೇ ರೀತಿಯಲ್ಲಿ ಮಾನವನ ಕರ್ಮಗಳು ಕೆಲವೊಮ್ಮೆ ಕ್ಷುಲ್ಲಕವಾಗಿ ಕಂಡರೂ ಅವುಗಳ ಪ್ರಭಾವ ದೂರ ಹೋಗುತ್ತದೆ.

ಈ ಆಯತ್‌ನಲ್ಲಿ, ಮನುಷ್ಯನು ತನ್ನ ಕಾರ್ಯಗಳಲ್ಲಿ ಬಹಳ ಎಚ್ಚರಿಕೆಯಿಂದ ಮತ್ತು ಜಾಗರೂಕನಾಗಿರಬೇಕು ಎಂದು ಹೇಳಲಾಗಿದೆ ಏಕೆಂದರೆ ಅದು ಅವನ ನಿಯಂತ್ರಣದಲ್ಲಿಲ್ಲದಿದ್ದಾಗ ಮತ್ತು ಅದರ ಪರಿಣಾಮವು ತುಂಬಾ ವಿಶಾಲವಾದಾಗ, ಅದು ಅಗೋಚರವಾಗಿರುತ್ತದೆ ಮತ್ತು ಲಗತ್ತಿಸಲ್ಪಡುತ್ತದೆ, ಆಗ ಅದು ಎಲ್ಲದರಿಂದ ಸ್ಪಷ್ಟವಾಗುತ್ತದೆ. ಅದನ್ನು ಅಳಿಸುವುದು ತುಂಬಾ ಕಷ್ಟ. ಆದ್ದರಿಂದ ಹೆಚ್ಚಿನ ಎಚ್ಚರಿಕೆಯ ಅಗತ್ಯವಿದೆ. ಅವನ ಕ್ರಿಯೆಗಳ ಫಲಿತಾಂಶವು ಬೇಗ ಅಥವಾ ನಂತರ ಬರುತ್ತದೆ. ಯಾಕೆಂದರೆ ಒಮ್ಮೊಮ್ಮೆ ಹಕ್ಕಿಯಂತೆ ಹಾರಿ ಹೋದಂತೆ ಅನಿಸಿದರೂ ಈ ಹಕ್ಕಿ ಕೊರಳಲ್ಲಿ ಕಟ್ಟಿಕೊಂಡಿರುವುದರಿಂದ ಮುಂದೊಂದು ದಿನ ಮರಳಿ ಬಂದು ಮನುಷ್ಯ ತನ್ನ ಕರ್ಮಗಳ ಸವಿಯನ್ನು ಸವಿಯಲೇ ಬೇಕು. ಇನ್ನೊಂದೆಡೆ ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ನುಡಿಯುತ್ತಾನೆ: **ಫಮಯ್ಯಅ್‌ಮಲ್ ಮಿಸ್ಕಾಲ ಝರ್ರತಿನ್ ಖೈರೈಯರಹ್; ವ ಮೈಂ ಯಅ್‌ಮಲ್ ಮಿಸ್ಕಾಲ ಝರ್ರತಿನ್ ಶರ್ರೈಂಯರಹ್**. (ಸೂರಃ ಝಿಲ್‌ಝಾಲ್) ಅಂದರೆ ಯಾರಾದರು ಕೆಂಪು ಇರುವೆಗೆ ಸರಿಸಮನಾದ ಒಳ್ಳೆಯ ಅಥವಾ ಕೆಟ್ಟ ಕೆಲಸ ಮಾಡಿದರೆ ಇರುವೆಯ ತೂಕಕ್ಕೆ ಸರಿಸಮಾನವಾದ ಒಳ್ಳೆಯ ಅಥವಾ ಕೆಟ್ಟ ಫಲಿತಾಂಶವನ್ನು ಖಂಡಿತವಾಗಿಯೂ ನೋಡುತ್ತಾನೆ. ಈ ಆಯತ್‌ನ ಅರ್ಥವು ತೌಬ (ಪಶ್ಚಾತ್ತಾಪವನ್ನು) ಸ್ವೀಕರಿಸುವುದಿಲ್ಲ ಎಂದಲ್ಲ. ಪಶ್ಚಾತ್ತಾಪವು ಖಂಡಿತವಾಗಿಯೂ ಸ್ವೀಕರಿಸಲ್ಪಡುತ್ತದೆ, ಆದರೆ ಪಾಪಿಯು ಖಂಡಿತವಾಗಿಯೂ ಹಿಂದೆ ಉಳಿಯುತ್ತಾನೆ, ಉದಾಹರಣೆಗೆ, ಪುಣ್ಯ ಮಾಡುವುದರಲ್ಲಿ ಸಮಾನರಾದ ಇಬ್ಬರು ಜನರಿದ್ದಾರೆ, ಅವರಲ್ಲಿ ಒಬ್ಬನು ಪಾಪವನ್ನು ಮಾಡಿದನು ನಂತರ ಪಶ್ಚಾತ್ತಾಪಪಟ್ಟನು. ಸರ್ವಶಕ್ತನಾದ ಅಲ್ಲಾಹನು ಖಂಡಿತವಾಗಿಯೂ ಅವನ ಪಾಪವನ್ನು ಕ್ಷಮಿಸುತ್ತಾನೆ, ಆದರೆ ಅವನು ಕೆಟ್ಟದ್ದನ್ನು ಮಾಡಿದಾಗ ಮತ್ತು ಇನ್ನೊಬ್ಬ ವ್ಯಕ್ತಿಯು ಒಳ್ಳೆಯದನ್ನು ಮಾಡಿದಾಗ, ಈ ಪಶ್ಚಾತ್ತಾಪ ಪಟ್ಟ ವ್ಯಕ್ತಿಯು ಅದೇ ಮೊದಲ ಹಂತದಲ್ಲಿಯೇ ಉಳಿದಿದ್ದನು, ಆದರೆ ಇನ್ನೊಬ್ಬ ವ್ಯಕ್ತಿಯು ಅವನಿಗಿಂತ ಮುಂದೆ ಹೋದನು. ಆದ್ದರಿಂದ, ಸರ್ವಶಕ್ತನಾದ ಅಲ್ಲಾಹನು ಈ ತಪ್ಪನ್ನು ಮಾಡಿದ ವ್ಯಕ್ತಿಯನ್ನು ಕ್ಷಮಿಸುತ್ತಾನೆ, ಆದರೆ ಅವನು ಅವನನ್ನು ಕೆಟ್ಟದ್ದನ್ನು ಮಾಡದ ಇತರ ವ್ಯಕ್ತಿಯೊಂದಿಗೆ ಸೇರಿಸುವುದಿಲ್ಲ. ಏನೇ ಇರಲಿ ಅವನು ಇವನಿಗಿಂತ ಒಂದು ಹೆಜ್ಜೆ ಮೇಲಿರುತ್ತಾನೆ. ಆದ್ದರಿಂದ ಪ್ರತಿಯೊಂದು ಕರ್ಮಗಳ ಉಳಿದಿರುವ

ಪರಿಣಾಮವನ್ನು ಹೊಂದಿರುತ್ತದೆ. ಈಗ, ಸರ್ವಶಕ್ತನಾದ ಅಲ್ಲಾಹನು ಈ ವಿಷಯವನ್ನು ವಿವರಿಸಲು ವೈರ್‌ಲೆಸ್ ಟೆಲಿಗ್ರಾಫಿ ಅಥವಾ ಟೆಲಿಫೋನ್‌ನ ಜ್ಞಾನವನ್ನು ಮನುಷ್ಯನಿಗೆ ನೀಡಿದ್ದಾನೆ, ಇದು ಸೂಕ್ಷ್ಮ ಚಲನೆಯೂ ಗಾಳಿಯಲ್ಲಿ ಕಂಪಿಸುತ್ತದೆ ಎಂದು ಸಾಬೀತುಪಡಿಸುತ್ತದೆ. ಆದ್ದರಿಂದ ಮನುಷ್ಯನು ತನ್ನ ಕಾರ್ಯಗಳಲ್ಲಿ ಬಹಳ ಜಾಗರೂಕರಾಗಿರಬೇಕು ಏಕೆಂದರೆ ಬೀಜದಂತಹ ಪ್ರತಿಯೊಂದು ಕರ್ಮವು ಹೊಸ ಸಸ್ಯವನ್ನು ಉತ್ಪಾದಿಸುತ್ತದೆ. ಅದು ಅವನ ಅರಿವಿಲ್ಲದೆ ಬೆಳೆಯುತ್ತಲೇ ಇರುತ್ತದೆ. **(ತಫ್ಸೀರ್ ಕಬೀರ್, ಸಂಪುಟ-4, ಪುಟ-312, ಪ್ರಕಟಿತ ಖಾದಿಯಾನ್ 2010)**

## ಪ್ರಮುಖ ಪ್ರಕಟಣೆ: ಅಹ್ಮದಿ ವಿದ್ಯಾರ್ಥಿಗಳ ಗಮನಕ್ಕೆ

ಜಾಮಿಯಾ ಅಹ್ಮದಿಯಾ ಖಾದಿಯಾನ್ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಸ್ಥಾಪಿಸಿದ ಪವಿತ್ರ ವಿದ್ಯಾಸಂಸ್ಥೆಯಾಗಿದೆ. ಅಲ್ಲಿ ಇಲ್ಲಿಯವರೆಗೆ ನೂರಾರು ಉಲಮಾಅ್ ಮತ್ತು ಮುಬಲ್ಲಿಗ್ ನವರು (ವಿದ್ವಾಂಸರು) ವಿದ್ಯಾವಂತರಾಗಿ ಇಸ್ಲಾಮಿನ ನಿಜವಾದ ಶಿಕ್ಷಣಗಳನ್ನು ಲೋಕದ ಮೂಲೆ ಮೂಲೆಯವರೆಗೆ ತಲುಪಿಸುವ ತಮ್ಮ ಕರ್ತವ್ಯಗಳನ್ನು ನೆರವೇರಿಸುತ್ತಿದ್ದಾರೆ. ಸಯ್ಯಿದುನಾ ಹುಝೂರ್ ಅನ್ವರ್(ಅತಬಅ) ಅವರು ಹಲವಾರು ಸಂದರ್ಭಗಳಲ್ಲಿ ಅಹ್ಮದಿ ವಿದ್ಯಾರ್ಥಿಯರನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಸ್ಥಾಪಿಸಿದ ಈ ಪವಿತ್ರ ಧಾರ್ಮಿಕ ವಿದ್ಯಾಸಂಸ್ಥೆಯಿಂದ ಶಿಕ್ಷಣ ಪಡೆದು ಸಂಘಟನೆಯ ಸೇವೆ ಸಲ್ಲಿಸಲು ಗಮನ ಸೆಳೆದಿದ್ದಾರೆ. ಆದ್ದರಿಂದ ಸಯ್ಯಿದುನಾ ಹುಝೂರೆ ಅನ್ವರ್(ಅಅಬಿಅ) ರವರ ನಿರ್ದೇಶನಗಳ ಪ್ರಕಾರ ಹೆಚ್ಚಿನ ಸಂಖ್ಯೆಯಲ್ಲಿ ವಾಖಿಫೀನ್ ನೌ ಮತ್ತು ವಾಖಿಫೀನೇತರರು ವಿದ್ಯಾರ್ಥಿಗಳು ಜಾಮಿಯಾ ಅಹ್ಮದಿಯಾದಲ್ಲಿ ಪ್ರವೇಶ ಪಡೆದು ಧಾರ್ಮಿಕ ಜ್ಞಾನ ಪಡೆದು ಸಂಘಟನೆಗೆ ಸೇವೆ ನೀಡಲು ಮುಂದಾಗಬೇಕಾಗಿದೆ. ಹೀಗೆ ಜಾಮಿಯಾ ಅಹ್ಮದಿಯಾದಲ್ಲಿ ಪ್ರವೇಶ ಬಯಸುವವರು- ವಖ್ಫೆ ನೌ ಭಾರತ (ನಝಾರತ್ ತಅ್‌ಲೀಮ್) ವಿಭಾಗದೊಡನೆ ಸಂಪರ್ಕಿಸಿರಿ. ಶೀಘ್ರ, ಅತೀ ಶೀಘ್ರವಾಗಿ ಜಾಮಿಯಾ ಅಹ್ಮದಿಯಾಗೆ ಪ್ರವೇಶ ಅರ್ಜಿ ತುಂಬಿ ದಿನಾಂಕ: 30 ಜೂನ್ ವರೆಗೆ ದಫ್ತರ್ ವಖ್ಫೆ ನೌ ಭಾರತ (ನಝಾರತ್ ತಅ್‌ಲೀಮ್) ಗೆ ಕಳುಹಿಸತಕ್ಕದ್ದು.

ಪ್ರವೇಶ ಪಡೆಯಲು ಕೆಳಗೆ ನಮೂದಿಸಿದ ಷರತ್ತುಗಳಿವೆ:

(1) ಮೆಟ್ರಿಕ್ ಪಾಸ್ ವಿದ್ಯಾರ್ಥಿಗಳಿಗಾಗಿ ವಯಸ್ಸು ಮಿತಿ 17 ವರ್ಷ ಮತ್ತು +2 ಪಾಸ್ ಆದವರಿಗೆ ವಯೋಮಿತಿ 19 ವರ್ಷ.

(2) ಜಾಮಿಯಾ ಅಹ್ಮದಿಯಾದಲ್ಲಿ ಪ್ರವೇಶ ಪಡೆಯಲು ನ್ಯಾಷನಲ್ ಕೆರಿಯರ್ ಪ್ಲಾನಿಂಗ್ ಕಮೀಟಿ ವಖ್ಫೆ ನೌ ಭಾರತ ವಿದ್ಯಾರ್ಥಿಗಳ ಸಂದರ್ಶನ (Interview) ಮತ್ತು ಲಿಖಿತ ಪರೀಕ್ಷೆ (written test) ತೆಗೆದುಕೊಳ್ಳಲಾಗುವುದು ಮತ್ತು ಜಾಮಿಯಾ ಅಹ್ಮದಿಯಾಗಾಗಿ ಅವರನ್ನು Select ಮಾಡಿಕೊಳ್ಳುವುದು. ಲಿಖಿತ ಪರೀಕ್ಷೆಯಲ್ಲಿ ಪವಿತ್ರ ಖುರ್‌ಆನ್, ಇಸ್ಲಾಂ, ಅಹ್ಮದಿಯತ್, ಧಾರ್ಮಿಕ ಜ್ಞಾನ, ಉರ್ದು, ಇಂಗ್ಲೀಷ್, ಸಾಮಾನ್ಯ e ÃÕÀ(General Knowledge) ಕುರಿತು ಪ್ರಶ್ನೆಗಳನ್ನು ಇರಿಸಲಾಗುವುದು.

(3) ಲಿಖಿತ ಪರೀಕ್ಷೆ ಮತ್ತು ಸಂದರ್ಶನದಲ್ಲಿ ಉತ್ತೀರ್ಣರಾದ ವಿದ್ಯಾರ್ತಿಗಳಿಗೆ ನೂರ್ ಹಾಸ್ಪಿಟಲ್ ಖಾದಿಯಾನ್‌ನಿಂದ ಆರೋಗ್ಯ ತಪಾಸಣೆ (Medical Test) ನಡೆಸಲಾಗುವುದು. ಲಿಖಿತ ಪರೀಕ್ಷೆ, ಸಂದರ್ಶನ ಮತ್ತು ಆರೋಗ್ಯ ತಪಾಸಣೆಯಲ್ಲಿ ಪಾಸಾದವರ ವಿದ್ಯಾರ್ಥಿಗಳನ್ನು ಸಯ್ಯಿದುನಾ ಹುಝೂರೆ ಅನ್ವರ್(ಅಬಿಅ) ಅವರ ಅನುಮತಿ ಪಡೆದು ಜಾಮಿಯಾ ಅಹ್ಮದಿಯಾದಲ್ಲಿ ಪ್ರವೇಶ ನೀಡಲಾಗುವುದು.

(4) ಪದವಿದಾರರು (Gradudate) ವಿದ್ಯಾರ್ಥಿಗಳನ್ನು ಜಾಮಿಯಾ ಅಹ್ಮದಿಯಾದಲ್ಲಿ ಪ್ರವೇಶಕ್ಕಾಗಿ ಆದ್ಯತೆ ನೀಡಲಾಗುವುದು.

**Addmission Form ಅನ್ನು E-Mail ಮೂಲಕ ಪಡೆಯಲು:**
**waqfenau@qadian.in**
**WAQE-E-NAU DEPARTMENT**
**(NAZARAT TALEEM)**
**DARUL BALAGH, CIVIL LINE, QADIAN.**
**Distt. GURDASPUR, PUNJAB (INDIA),**
**PIN: 143516**
**CONTACT: 01872-500975, 9988991775**
**(ಸದರ್ ನ್ಯಾಷನಲ್ ಕೆರಿಯರ್ ಪ್ಲಾನಿಂಗ್ ಕಮೀಟಿ ವಖ್ಫೆ ನೌ ಭಾರತ್)**

## *128 ನೇ ಜಲ್ಸಾ ಸಾಲಾನ ಖಾದಿಯಾನ್ 29, 30, 31 ಡಿಸೆಂಬರ್ 2023ರಂದು ಆಯೋಜಿಸಲಾಗುವುದು*

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 128ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 29, 30 ಮತ್ತು 31ನೇ ಡಿಸೆಂಬರ್ 2023 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮಲ್ಲಾಹ್.**

**(ನಾಝಿರ್ ಇಸ್ಲಾಹ್-ವ-ಇರ್‌ಶಾದ್ ಖಾದಿಯಾನ್)**

## ದಿವ್ಯದೂತರು (ಮಲಾಯಿಕ)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ: "ಒಬ್ಬ ಮಹತ್ವಶಾಲಿ ವ್ಯಕ್ತಿ ದೇವನ ಪ್ರಾತಿನಿಧ್ಯದ ಉಡುಗೆಯಿಂದ ಭೂಷಿತರಾಗಿ (ದೇವನ ಖಲೀಫರಾಗಿ) ಮತ್ತು ದೇವವಾಣಿಯಿಂದ ಅನುಗ್ರಹೀತರಾಗಿ ಭೂಮಿಗೆ ಇಳಿಯುವಾಗ ದಿವ್ಯದೂತರ ಮತ್ತು ಪವಿತ್ರಾತ್ಮದ ಅವತರಣ ಅಥವಾ ಭೂಮಿಗೆ ಇಳಿಯುವಿಕೆ ಉಂಟಾಗುತ್ತದೆ.ಪವಿತ್ರಾತ್ಮ ವಿಶಿಷ್ಟವಾಗಿ ದೇವನ ಪ್ರತಿನಿಧಿಗೆ ಲಭಿಸುತ್ತದೆ."

***(ಫತ್‌ಹೆ ಇಸ್ಲಾಮ್; ರೂಹಾನೀ ಖಝಾಇನ್ ಸಂಪುಟ 3, ಪುಟ 12)***

## ಸದರ್ ಅಂಜುಮನ್ ಅಹ್ಮದಿಯಾ, ಅಂಜುಮನ್ ತೆಹ್ರೀಕೆ ಜದೀದ್, ಅಂಜುಮನ್ ವಖ್ಫೆ ಜದೀದ್ ಖಾದಿಯಾನ್‌ನಲ್ಲಿ ಸೇವೆಸಲ್ಲಿಸಲು ಆಸಕ್ತಿ ಹೊಂದಿದವರು ಗಮನಿಸಬೇಕು

**ಮಾಲಿ (ತೋಟಗಾರ) / ಕೇರ್‌ಟೇಕರ್ / ಕಾವಲುಗಾರ / ಅಡುಗೆಗಾರ / ರೊಟ್ಟಿ ಮಾಡುವವ /ಮಸ್ಜಿದ್ ಸೇವಕಗೆ ನಾಲ್ಕನೇ ಗ್ರೇಡ್‌ಗೆ (ಶರತ್ತುಗಳು) ಅವಶ್ಯಕತೆಗಳು**

(1) ಅಭ್ಯರ್ಥಿಯ ವಯಸ್ಸು 40 ವರ್ಷಗಳಿಗಿಂತ ಹೆಚ್ಚಿರಬೇಕು ಮತ್ತು 18 ವರ್ಷಗಳಿಗಿಂತ ಕಡಿಮೆಯಿರಬಾರದು (2) ಅಭ್ಯರ್ಥಿಯ ಯಾವುದೇ ಶೈಕ್ಷಣಿಕ ಅವಶ್ಯಕತೆಗಳಿಲ್ಲ (3) ಜನನ ಪ್ರಮಾಣಪತ್ರವನ್ನು ಹಾಜರುಪಡಿಸಬೇಕು (4) ಈ ಪ್ರಕಟಣೆಯ ನಂತರ 2 ತಿಂಗಳೊಳಗೆ ಸ್ವೀಕರಿಸಿದ ಅರ್ಜಿಗಳನ್ನು ಪರಿಗಣಿಸಲಾಗುವುದು (5) ಕಾರ್ಮಿಕರ ನೇಮಕಾತಿಗಾಗಿ ಕೇಂದ್ರ ಸಮಿತಿಯ ಸಂದರ್ಶನದಲ್ಲಿ ಯಶಸ್ವಿಯಾಗುವ ಅಭ್ಯರ್ಥಿಗಳನ್ನು ಮಾತ್ರ ಸೇವೆಗೆ ತೆಗೆದುಕೊಳ್ಳಲಾಗುತ್ತದೆ (6) ಸಂದರ್ಶನದಲ್ಲಿ ಯಶಸ್ವಿಯಾದರೆ, ಅಭ್ಯರ್ಥಿಯು ನೂರ್ ಆಸ್ಪತ್ರೆ ಖಾದಿಯಾನ್‌ನಲ್ಲಿ ವೈದ್ಯಕೀಯ ಪರೀಕ್ಷೆಗೆ ಒಳಗಾಗಬೇಕಾಗುತ್ತದೆ ಮತ್ತು ಯಾವ ಅಭ್ಯರ್ಥಿಗಳನ್ನು ನೂರ್ ಆಸ್ಪತ್ರೆಯ ವೈದ್ಯಕೀಯ ಮಂಡಳಿಯ ವರದಿಯ ಪ್ರಕಾರ ಆರೋಗ್ಯಕರ ಮತ್ತು ಸದೃಢರಾಗಿರುವವರು ಅರ್ಹರಾಗಿರುತ್ತಾರೆ ಅಂತಹ ಅಭ್ಯರ್ಥಿಗೆ ಮಾತ್ರ ಸೇವೆಗೆ ಪರಿಗಣಿಸಲಾಗುತ್ತದೆ (7) ಆಯ್ಕೆಯ ಸಂದರ್ಭದಲ್ಲಿ, ಅಭ್ಯರ್ಥಿಯು ಅವನ/ಅವಳ ಸ್ವಂತ ವಸತಿಯ ವ್ಯವಸ್ಥೆ ಮಾಡಬೇಕಾಗುತ್ತದೆ (8) ಖಾದಿಯಾನ್‌ಗೆ ಪ್ರಯಾಣದ ವೆಚ್ಚಗಳು ಅಭ್ಯರ್ಥಿಯು ಜವಾಬ್ದಾರಿಯಾಗಿರುತ್ತದೆ. **(ಗಮನಿಸಿ:** ಸಂದರ್ಶನದ ದಿನಾಂಕದ ಬಗ್ಗೆ ಅಭ್ಯರ್ಥಿಗಳಿಗೆ ನಂತರ ತಿಳಿಸಲಾಗುವುದು)

***ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:***

ನಝಾರತ್ ದೀವಾನ್ ಸ್ರ ಅಂಜುಮನ್ ಅಹ್ಮದಿಯಾ
ಖಾದಿಯಾನ್-143516
ಮೊಬೈಲ್: 09682627592, 09682587713,
ಕಛೇರಿ: 01872-501130
ಇ-ಮೇಲ್: diwan@qadian.in

**ಆಡಂಬರ ಮತ್ತು ತೋರ್ಪಡಿಕೆಗೊಸ್ಕರ ಹಕ್ ಮಹರನ್ನು ನಿಶ್ಚಯಿಸುವುದು ತಪ್ಪು ಸಂಪ್ರದಾಯವಾಗಿರುತ್ತದೆ.**

ಹಝ್ರತ್ ಮಸೀಹ್ ಮೌಊದ್(ಅ) ನುಡಿಯುತ್ತಾರೆ:

ವಧು ಹಾಗೂ ವರನ ಕಡೆಯವರು ಇಬ್ಬರು ಸೇರಿ ರಾಜಿಯಾಗಿ ಹಕ್ ಮಹರ್ ನಿಶ್ಚಯಿಸಿ ಕೊಳ್ಳುತ್ತಾರೆ ಇದಕ್ಕೆ ಯಾವುದೇ ಆಕ್ಷೇಪವಿಲ್ಲ. ಆದರೆ ಶರೀಅತ್ತಿನಲ್ಲಿ ಹಕ್ ಮಹರ್ ಇಷ್ಟೇ ನೀಡಬೇಕೆಂಬ ನಿಯಮ ಅಧಿಕೃತವಾಗಿ ಹದೀಸುಗಳಲ್ಲಿ ಯಾವುದೇ ಉಲ್ಲೇಖವಿಲ್ಲ. ಆದರೆ ಆ ಸಂಧರ್ಭಕನ್ನುಸಾರ ಹಕ್ ಮಹರ್ ನಿಶ್ಚಯಿಸಿಕೊಳ್ಳಬಹುದು. ಅಂದರೆ ಪ್ರಸಕ್ತ ಸಮಯದಲ್ಲಿನ ಜನರ ಜೀವನ ಮಟ್ಟವೇ ಆಧಾರವಾಗಿರುತ್ತದೆ.

ನಮ್ಮ ಪ್ರಾಂತ್ಯದಲ್ಲಿರುವ ಒಂದು ಕೆಟ್ಟ ಸಂಪ್ರದಾಯವೆಂದರೆ ಕೇವಲ ಹೊರ ಜಗತ್ತಿನ ತೋರಿಕೆಗಾಗಿ ಹಾಗೂ ಆಡಂಬರಕ್ಕಾಗಿ ಲಕ್ಷಾಂತರ ಹಕ್ ಮಹರ್ ಅನ್ನು ನಿಶ್ಚಿಸಿಕೊಳ್ಳುತ್ತಾರೆ. ಆದರೆ ಅವರ ಉದ್ದೇಶ ಬೇರೆಯೇ ಅಗಿರುತ್ತದೆ. ಅದೇ ರೀತಿ ವಧುವಿನ ಕಡೆಯವರು ವರನನ್ನು ತನ್ನ ಹಿಡಿತದಲ್ಲಿ ಇರಿಸಿಕೊಳ್ಳಲು ಈ ರೀತಿಯ ಹಕ್ ಮಹರ್‌ಅನ್ನು ನಿಶ್ಚಯಿಸಿಕೊಳ್ಳುತ್ತಾರೆ. ಆದರೆ ಇದರಿಂದ ಬೇರೆ ಅನೇಕ ಸಮಸ್ಯೆಗಳು ಉದ್ಭವವಾಗುತ್ತದೆ. **(ಮಲ್‌ಫೂಝಾತ್, ಸಂಪುಟ-3, ಪುಟ-284) (ರಿಶ್ತನಾತ ವಿಭಾಗ, ನಝಾರತ್ ಇಸ್ಲಾಹ್ ವ ಇರ್ಷಾದ್, ಖಾದಿಯಾನ್)**

**ವಾಖಿಫೀನೆ ಝಿಂದಗಿ ಹಾಗೂ ಧರ್ಮೋಪದೇಶ ಮತ್ತು ತರಬೇತಿಯ ಕರ್ತವ್ಯವನ್ನು ನಿರ್ವಹಿಸಬಲ್ಲ ಧಾರ್ಮಿಕ ಜ್ಞಾನವನ್ನು ಹೊಂದಿರುವವರ ಅಗತ್ಯವು ಹೆಚ್ಚುತ್ತಿದೆ. ಆದ್ದರಿಂದ, ಈ ಕೆಲಸವನ್ನು ವಿಶೇಷವಾಗಿ ಮಾಡುವ ಒಂದು ಗುಂಪು ಇರಬೇಕು. ನಿಮ್ಮ ಮಕ್ಕಳನ್ನು ಜಾಮಿಯ ಅಹ್ಮದೀಯಾದಲ್ಲಿ ಶಿಕ್ಷಣವನ್ನು ಪಡೆಯಲು ಅರ್ಪಿಸಿ**

ಹಝ್ರತ್ ಅಮೀರ್-ಉಲ್-ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ)ರವರು ನುಡಿಯುತ್ತಾರೆ:

ಜಮಾಅತ್ತಿನ ಅಗತ್ಯಗಳು ಹೆಚ್ಚಾದಂತೆ ತಬ್ಲೀಗಿನ ಕ್ಷೇತ್ರ ಮತ್ತು ಇತರ ಸೇವಾ ಕ್ಷೇತ್ರಗಳಲ್ಲಿ ವಾಖಿಫೀನೆ ಝಿಂದಗಿಯರ ಮತ್ತು ಮುಬಲ್ಲಿಗೀನರ (ಪ್ರಚಾರಕರು) ಅಗತ್ಯವಿದೆ. ಈ ವಿಸ್ತರಣೆಯಾಗುತ್ತಿದ್ದಂತೆ ಕೆಲಸವು ಸಹ ಹೆಚ್ಚುತ್ತಿದೆ, ಅಹ್ಮದಿಯತ್‌ನ ಸಂದೇಶ ಹರಡುತ್ತಿದೆ. ಜಗತ್ತು ಕೂಡ ಅಹ್ಮದಿಯತ್ ಅನ್ನು ಸ್ವೀಕರಿಸುತ್ತಾ ಇದೆ. ಇದರೊಂದಿಗೆ, ವಾಖಿಫೀನೆ ಝಿಂದಗಿ ಹಾಗೂ ಧರ್ಮೋಪದೇಶ ಮತ್ತು ತರಬೇತಿಯ ಕರ್ತವ್ಯವನ್ನು ನಿರ್ವಹಿಸಬಲ್ಲ ಧಾರ್ಮಿಕ ಜ್ಞಾನವನ್ನು ಹೊಂದಿರುವವರ ಅಗತ್ಯವು ಹೆಚ್ಚುತ್ತಿದೆ......... ಜಮಾಅತ್ತಿನ ಪ್ರತಿಯೊಬ್ಬ ವ್ಯಕ್ತಿಯು ಯಾವಾಗಲೂ ತಬ್ಲೀಗ್‌ನಲ್ಲಿ ಅಥವಾ ತರಬೇತಿ ನೀಡುವುದರಲ್ಲಿ ನಿರತರಾಗಿರಲು ಸಾಧ್ಯವಿಲ್ಲ ಆದ್ದರಿಂದ, ಈ ಕೆಲಸವನ್ನು ವಿಶೇಷವಾಗಿ ಮಾಡುವ ಒಂದು ಗುಂಪು ಇರಬೇಕು ಎಂದು ಅಲ್ಲಾಹನು ಹೇಳಿರುವನು. ಇನ್ನೊಂದು ಸ್ಥಳದಲ್ಲಿ, ಉಮ್ಮತ್ತಿನ ಪ್ರತಿಯೊಬ್ಬ ವ್ಯಕ್ತಿಗೂ ಒಳ್ಳೆಯ ಕಾರ್ಯಗಳನ್ನು ಹರಡುವ, ಕೆಟ್ಟದ್ದನ್ನು ತಡೆಯುವ ಮತ್ತು ಅಲ್ಲಾಹನ ಕಡೆಗೆ ಅಹ್ವಾನಿಸುವ ಕರ್ತವ್ಯವನ್ನು ಪೂರೈಸುವ ಜವಾಬ್ದಾರಿಯನ್ನು ವಹಿಸಲಾಗಿದೆ. ಆದರೆ ಮತ್ತೆ ಹೇಳಿರುವುದು ಏಕೆಂದರೆ ಪ್ರಪಂಚದ ವ್ಯವಸ್ಥೆಯನ್ನು ಸಹ ನಡೆಸಬೇಕಾಗಿದೆ, ಆದ್ದರಿಂದ ಅದರಲ್ಲಿ ತೊಡಗಿರುವವರು ಯಾವಾಗಲೂ ಸಮಯವನ್ನು ನೀಡಲು ಸಾಧ್ಯವಿಲ್ಲ. ಧರ್ಮೋಪದೇಶ ಮತ್ತು ತರಬೇತಿಯ ಕೆಲಸವನ್ನು ಅತ್ಯುತ್ತಮ ರೀತಿಯಲ್ಲಿ ಮಾಡುವ ಮನೋಧರ್ಮ ಎಲ್ಲರಿಗೂ ಇರುವುದಿಲ್ಲ. ಮತ್ತು ಉಮ್ಮತ್ತಿನ ಎಲ್ಲಾ ಸದಸ್ಯರು ಧರ್ಮ ಮುಬಲ್ಲಿಗ್ ಮತ್ತು ಮುರಬ್ಬಿಯವರಿಗೆ ಅಗತ್ಯವಾದ ಧರ್ಮದ ತಿಳುವಳಿಕೆಯನ್ನು ಪಡೆಯಲು ಸಾಧ್ಯವಿಲ್ಲ. ಮತ್ತು ಎಲ್ಲಾ ಜನರಿಗೆ ವಿಶೇಷ ಗಮನದಿಂದ ತರಬೇತಿಯು ಸಹ ನೀಡಲು ಸಾಧ್ಯವಾಗುವುದಿಲ್ಲ. ಆದ್ದರಿಂದ, ಸರ್ವಶಕ್ತನಾದ ಅಲ್ಲಾಹನ ಆದೇಶಗಳನ್ನು, ಅನುಸರಿಸಬೇಕಾದ ಆಜ್ಞೆಗಳನ್ನು ಮತ್ತು ತಡೆಯಬೇಕಾದ ನಿಷೇಧಗಳನ್ನು ಪರಿಚಯ ಮಾಡಿಕೊಳ್ಳಲು, ಮತ್ತು ಅದರ ಆಳವಾದ ಬುದ್ಧಿವಂತಿಕೆಯನ್ನು ಕಲಿಯಲು ಮತ್ತು ನಂತರ ಅದನ್ನು ಹರಡಲು. ಧರ್ಮವನ್ನು ಪೂರ್ಣ ಗಮನದಿಂದ ಕಲಿಯುವ ಒಂದು ವಿಶೇಶ ಗುಂಪು ಇರಬೇಕು. ಮಾಶಾಅಲ್ಲಾಹ್, ತಮ್ಮ ಅಭಿರುಚಿ ಮತ್ತು ಹವ್ಯಾಸಗಳಿಂದ ಲೌಕಿಕ ಶಿಕ್ಷಣದ ಜೊತೆಗೆ ಧಾರ್ಮಿಕ ಜ್ಞಾನದ ಬಗ್ಗೆ ಉತ್ತಮ ತಿಳುವಳಿಕೆಯನ್ನು ಹೊಂದಿರುವ ಅನೇಕ ಜನರು ಜಮಾತ್‌ನಲ್ಲಿದ್ದಾರೆ. ಆದರೆ ಕೆಲವೊಮ್ಮೆ ಅಥವ ಸಾಮಾನ್ಯವಾಗಿಯೇ ಅವರ ಇತರ ಕಾರ್ಯಗಳ ಕಾರಣದಿಂದಾಗಿ ಸಮಯವನ್ನು ನೀಡುಲು ನಿರಂತರವಾಗಿ ಸಾಧ್ಯವಾಗುವುದಿಲ್ಲ. ಅದಾಗ್ಯೂ, ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ, ಧರ್ಮದ ಕೆಲಸಕ್ಕಾಗಿ ವಾಖಿಫೀನೆ ಝಿಂದಗಿಯರ ಗುಂಪು ಇರಬೇಕು ಮತ್ತು ಇಸ್ಲಾಂ ಸಾರ್ವತ್ರಿಕ ಧರ್ಮವಾಗಿರುವುದರಿಂದ ಅದು ಪ್ರತಿಯೊಂದು ಪಂಗಡದಿಂದ, ಅಂದರೆ ಪ್ರತಿಯೊಂದು ಗುಂಪಿನಿಂದ, ಪ್ರತಿ ವರ್ಗದಿಂದ, ಪ್ರತಿಯೊಂದು ವಿಭಾಗದಿಂದ ಜನರ ಜನರ ಗುಂಪು ಇರಬೇಕು. ತದನಂತರ ಮತ್ತಷ್ಟು ವಿಸ್ತರಿಸಿದರೆ, ಪ್ರತಿಯೊಂದು ಖೌಮಿನ(ಗೋತ್ರದಿಂದ) ಜನರು ಧರ್ಮವನ್ನು ಕಲಿಯಬೇಕು ಮತ್ತು ಮುಂದೆ ಕಲಿಸಬೇಕು ಎಂದು ಹೇಳಿರುವನು. ಪ್ರತಿಯೊಂದು ಖೌಮಿನವರು ಮತ್ತು ಪ್ರತಿಯೊಂದು ವರ್ಗವು ವಿಭಿನ್ನ ಮನೋಧರ್ಮ, ಮನೋವಿಜ್ಞಾನ ಮತ್ತು ವಿಧಾನವನ್ನು ಹೊಂದಿದೆ. ಅದಕ್ಕೆ ತಕ್ಕಂತೆ ಉಪದೇಶ ಮಾಡುವ ವಿಧಾನವನ್ನು ಕೈಗೊಳ್ಳಬೇಕು. ಈ ರೀತಿಯಲ್ಲಿ, ತಬ್ಲೀಗ್ ಮತ್ತು ತರಬೇತಿಯು ಸುಲಭವಾಗುತ್ತದೆ. ಏನೇ ಇರಲಿ, ಸರ್ವಶಕ್ತನಾದ ಅಲ್ಲಾಹನು ತಬ್ಲೀಗಿಗಾಗಿ ಮತ್ತು ತರಬೇತಿಗಾಗಿ ಕಾರ್ಯವನ್ನು ನಿರ್ವಹಿಸುವ ವಿಶ್ವಾಸಿಗಳ ಗುಂಪು ಇರಬೇಕು ಮತ್ತು ನಂತರ ಪ್ರತಿಯೊಂದು ಖೌಮು ಮತ್ತು ಪ್ರತಿಯೊಂದು ವರ್ಗದ ಜನರು ಇರಬೇಕು ಇದರಿಂದ ಈ ಕಾರ್ಯವನ್ನು ಸುಗಮಗೊಳಿಸಬಹುದು ಎಂದು ನಮಗೆ ಮಾರ್ಗದರ್ಶನ ನೀಡಿರುವನು.

ಆದುದರಿಂದ ಅಹ್ಮದಿಯಾ ಜಮಾಅತ್ ಈ ತತ್ವದಡಿಯಲ್ಲಿ ಧರ್ಮಕ್ಕಾಗಿ ತನ್ನ ಜೀವನವನ್ನು ಮುಡಿಪಾಗಿಡುವ ವ್ಯವಸ್ಥೆಯನ್ನು ಹೊಂದಿದೆ. ಮತ್ತು ನಾನು ಹೇಳಿದಂತೆ, ಅಲ್ಲಾಹನ ಅನುಗ್ರಹದಿಂದ ವಿವಿಧ ಖೌಮುಗಳು ಮತ್ತು ವರ್ಗಗಳ ಜನರು ಈಗ ಈ ವ್ಯವಸ್ಥೆಯ ಭಾಗವಾಗಿದ್ದಾರೆ ಮತ್ತು ಆಗುತ್ತಿದ್ದಾರೆ. ಮತ್ತು ನಾನು ಹೇಳಿದಂತೆ, ಜಮಾಅತ್ತಿನ ಅಗತ್ಯತೆಗಳು ಹೆಚ್ಚಾದಂತೆ, ಈ ಸಂಖ್ಯೆಯ ಅಗತ್ಯವು ಹೆಚ್ಚಾಗುತ್ತದೆ ಮತ್ತು ಈ ಅಗತ್ಯವು ಬೆಳೆಯುತ್ತಲೇ ಇರುತ್ತದೆ. ಇದೀಗ ಪ್ರಸ್ತುತ ಕಾಲದಲ್ಲಿ ಅಗತ್ಯವಿರುವುದು ಮಾತ್ರವಲ್ಲದೆ ಭವಿಷ್ಯದಲ್ಲಿಯು ಇದರ ಅಗತ್ಯವು ಹೆಚ್ಚಾಗಲಿದೆ.

**(ಖುತ್‌ಬ ಜುಮುಅ, ಅಕ್ಟೋಬರ್ 22, 2010)**

**(ಇಂಚಾರ್ಜ್ ನಖ್ಫೆ ನೌ ವಿಭಾಗ ಭಾರತ)**

## ಪ್ರಮುಖ ಘೋಷಣೆ

### ನೂರ್ ಆಸ್ಪತ್ರೆ ಖಾದಿಯಾನ್‌ನಲ್ಲಿ X-Ray ತಂತ್ರಜ್ಞರ ಅಗತ್ಯವಿದೆ

**ಷರತ್ತುಗಳು:**

(1) ಅಭ್ಯರ್ಥಿಯ ವಯಸ್ಸು 37 ವರ್ಷಗಳಿಗಿಂತ ಹೆಚ್ಚಿರಬಾರದು. (2) ಅಭ್ಯರ್ಥಿಯು ಸರ್ಕಾರಿ ಅಥವಾ ನೋಂದಾಯಿತ ಸಂಸ್ಥೆಯಿಂದ X-Ray ತಂತ್ರಜ್ಞ ಕೋರ್ಸ್ ಅನ್ನು ಪೂರ್ಣಗೊಳಿಸಿರಬೇಕು ಮತ್ತು ಅಂತಹ ಕೋರ್ಸ್ ಅನ್ನು Paramadical council Of Punjab ಸ್ವೀಕರಿಸುತ್ತಿರಬೇಕು. (3) ವೈದ್ಯರ ಸಲಹೆ ಸೂಚನೆಗಳನ್ನು ಅರ್ಥ ಮಾಡಿಕೊಳ್ಳಲು ಇಂಗ್ಲಿಷ್ ಉತ್ತಮವಾಗಿರಬೇಕು (4) ಅನುಭವ ಇರುವವರಿಗೆ ಆದ್ಯತೆ ನೀಡಲಾಗುವುದು. (5) ಬದರ್ ವಾರಪತ್ರಿಕೆಯಲ್ಲಿ ಪ್ರಕಟವಾದ ಕೊನೆಯ ಪ್ರಕಟಣೆಯ ನಂತರ 2 ತಿಂಗಳೊಳಗೆ ಸ್ವೀಕರಿಸಿದ ಅರ್ಜಿಗಳನ್ನು ಪರಿಗಣಿಸಲಾಗುವುದು. (6) ಆಸಕ್ತ ಅಭ್ಯರ್ಥಿಗಳು ತಮ್ಮ ಅರ್ಜಿಗಳನ್ನು ಮುದ್ರಿತ ನಮೂನೆಯಲ್ಲಿ ತಮ್ಮ ಜಿಲ್ಲಾ ಅಮೀರ್ / ಸ್ಥಳೀಯ ಅಮೀರ್ / ಅಧ್ಯಕ್ಷರು / ಮುಬಲ್ಲಿಗ್ ಇಂಚಾರ್ಜ್ ಅವರ ದೃಢೀಕರಣದ ನಂತರ ಕಳುಹಿಸತಕ್ಕದ್ದು. (7) ಸಂದರ್ಶನದಲ್ಲಿ ಯಶಸ್ವಿಯಾದರೆ, ಅಭ್ಯರ್ಥಿಯು ನೂರ್ ಆಸ್ಪತ್ರೆ ಖಾದಿಯಾನ್‌ನಲ್ಲಿ ವೈದ್ಯಕೀಯ ಪರೀಕ್ಷೆಗೆ ಒಳಗಾಗಬೇಕಾಗುತ್ತದೆ ಮತ್ತು ನೂರ್ ಆಸ್ಪತ್ರೆಯ ವೈದ್ಯಕೀಯ ಮಂಡಳಿಯ ವರದಿಯ ಪ್ರಕಾರ ಆ ಅಭ್ಯರ್ಥಿ ಮಾತ್ರ ಸೇವೆಗೆ ಅರ್ಹರಾಗಿರುತ್ತಾರೆ (8) ಆಯ್ಕೆಯ ಸಂದರ್ಭದಲ್ಲಿ, ಅಭ್ಯರ್ಥಿಯು ಖಾದಿಯಾನ್‌ನಲ್ಲಿ ತನ್ನದೇ ಆದ ವಸತಿ ಸೌಕರ್ಯವನ್ನು ಏರ್ಪಡಿಸಬೇಕಾಗುತ್ತದೆ. (11) ಅಭ್ಯರ್ಥಿಗಳು ಸಂದರ್ಶನಕ್ಕೆ ಬಂದಾಗ ತಮ್ಮ ಮೂಲ ಶೈಕ್ಷಣಿಕ ಪ್ರಮಾಣಪತ್ರಗಳನ್ನು ತಮ್ಮೊಂದಿಗೆ ತರಬೇಕು.

**ಗಮನಿಸಿ:-** ಅಭ್ಯರ್ಥಿಗಳಿಗೆ ಲಿಖಿತ ಪರೀಕ್ಷೆ ಮತ್ತು ಸಂದರ್ಶನದ ದಿನಾಂಕದ ಬಗ್ಗೆ ನಂತರ ತಿಳಿಸಲಾಗುವುದು.

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:**
**ನಝಾರತ್ ದೀವಾನ್ ಸದರ್ ಅಂಜುಮನ್ ಅಹ್ಮದಿಯಾ**
**ಖಾದಿಯಾನ್ ಪಿನ್ ಕೋಡ್-143516**
**ಮೊಬೈಲ್ : 09646351280 / 09682587713 ಕಛೇರಿ : 01872-501130**
**ಈ-ಮೇಲ್: diwan@qadian.in**

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadr.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2023-25 Vol No.04, Thursday, 08 June 2023, Issue No. 23

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/- ) (WEIGHT: 20-50, grms / issue)

## ಇಸ್ಲಾಂ ಮತ್ತು ಸೈಯ್ಯದ್‌ನಾ ಹಝ್ರತ್ ಮಸಿಹ್ ಮೌಊದ್ ಅಲೈಹಿಸ್ಸಲಾಮ್‌ರವರ ಕಟು ವಿರೋಧಿಯಾದ ಅಲೆಕ್ಸಾಂಡರ್ ಡೂಯಿಯ ಝಿಯಾನ್ ನಗರದಿಂದ ಪ್ರಾರಂಭವಾದ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ)ರವರ ಅಸಾಧಾರಣ ಅನುಗ್ರಹದಾಯಕ ಅಮೇರಿಕದ ಐತಿಹಾಸಿಕ ಪ್ರವಾಸ ಸೆಪ್ಟೆಂಬರ್, ಅಕ್ಟೋಬರ್ 2022

*(ಬದರ್ ಸಂಚಿಕೆ-22ರ ಉಳಿದ ಭಾಗ ಮುಂದುವರಿಸಲಾಗಿದೆ)*

ಅನಂತರ ಮಹಿಳಾ ವಿಜ್ಞಾನಿಗಳ ಪರವಾಗಿ ಡಾ. ಶಹ್ನಾಝ್ ಬಟ್ ಸಾಹಿಬ್ ನಮ್ಮ ಸಂಶೋಧನೆಯ ಕುರಿತು ಹೇಳಿದರು. ಅವರು P.H.D. ಆಗಿದ್ದಾರೆ. ಸೆಂಟ್ ಜೋಸೆಫ್ ವಿಶ್ವವಿದ್ಯಾನಿಲಯದಲ್ಲಿ ಪ್ರೋಫೆಸರ್ ಆಗಿದ್ದಾರೆ ಮತ್ತು ಅದೇ ವಿಶ್ವವಿದ್ಯಾನಿಲಯದಲ್ಲಿ (Neuropsyche phraamodology lab, Director ಅಗಿದ್ದಾರೆ. ಅವರು ತಿಳಿಸಿದರು. ವಿವಿಧ ರೀತಿಯ ಮಾನಸಿಕ ರೋಗಗಳೆಲ್ಲ (Psychlogical Director) ನಾನಾ ಬಗೆಯ ಅಧ್ಯಯನ ನಡೆಸಲು ವಿವಿಧ ವೈಜ್ಞಾನಿಕ Model ಬಳಸುತ್ತಿದ್ದಾರೆ.

ಅನಂತರ ಓಲ್ವಿಯ ವಿಲಿಯಮ್ಸ್ ಬಾರ್ಬರ್ ಅವರು North Western University, Shicago ದಲ್ಲಿ ಪಿ.ಹೆಚ್.ಡಿ ೧ು ಅಭ್ಯರ್ಥಿಯಾಗಿದ್ದಾರೆ. ಅವರು ತಮ್ಮ ಸಂಶೋಧನೆ ಪ್ರಕಾರ ಮನೆಯಲ್ಲಿರುವ ಕ್ರಿಮಿ ಜಂತುಗಳ ಮೇಲೆ Spraying disinfetant ಮಾಡುವುದರಿಂದ Antibiotic Assistant Bacteria ಸಮಸ್ಯೆ ಉದ್ಭವವಾಗುತ್ತದೆ ಎಂದು ತಿಳಿಸಿದರು.

ಅನಂತರ ನಾಯಿಲ ರಜಾಕ್ ಸಾಹಿಬಾ ಅವರು Yale ವಿಶ್ವವಿದ್ಯಾನಿಲಯದಲ್ಲಿ Early medieramean Religions ನಲ್ಲಿ P.H.D. ಅಭ್ಯರ್ಥಿಯಾಗಿದ್ದಾರೆ. ಅವರು ಹೇಳಿದರು. ಇಸ್ಲಾಮ್ ಧರ್ಮದ ಪ್ರಾರಂಭದಲ್ಲಿ ಫೆಸಿಫಿಕ್ ಸಮುದ್ರದ ಕ್ಷೇತ್ರಗಳ ಅಧ್ಯಯನ ಮಾಡಲು Archology ೧ು ಹೊಸ ಹೊಸ ವಿಧಾನಗಳನ್ನು ಬಳಕೆ ಮಾಡಬಹುದಾಗಿದೆ.

ಹುಝೂರ್ ಅನ್ವರ್(ಅಬಿಅ) ಅವರು ವಿಶೇಷವಾಗಿ ಆ ಸಂಶೋಧಕರಿಂದ ಅವರ ಕಾರ್ಯಗಳ ಫಲಿತಾಂಶದ ಬಗ್ಗೆ ಮತ್ತು ಸಮಾಜದ ಮೇಲೆ ಅದರಿಂದ ಆಗುವ ಪರಿಣಾಮಗಳ ಬಗ್ಗೆ ವಿಚಾರಿಸಿದರು.

ಕೊನೆಯಲ್ಲಿ ಸಂಘದವರು ಹುಝೂರೆ ಅನ್ವರ್ ಅವರಿಗೆ ಒಂದು ಆಸ್ಟ್ರೋ ಲ್ಯಾಬ್ ನೀಡಿದರು. ಅದು ಹಿಂದಿನ ಕಾಲಗಳಲ್ಲಿ ಖಗೋಳ ಮಾಪನಕ್ಕೆ ಬಳಸುತ್ತಿದ್ದ ಉಪಕರಣಗಳಾಗಿದ್ದವು. ಇದನ್ನು ಆರಂಭಿಕ ಮುಸ್ಲಿಂ ವಿಜ್ಞಾನಿಗಳು ಕಂಡುಹಿಡಿದಿದ್ದರು.

ಈ ಕಾರ್ಯಕ್ರಮವು ಬೆಳಿಗ್ಗೆ 8.05 ರವರೆಗೆ ಮುಂದುವರೆಯಿತು. ನಂತರ 8:30 ಕ್ಕೆ ಹುಝೂರೆ ಅನ್ವರ್ ಮಗ್ರಿಬ್ ಮತ್ತು ಇಶಾ ಪ್ರಾರ್ಥನೆಗಳನ್ನು ಒಟ್ಟಿಗೆ ನಿರ್ವಹಿಸಿಕೊಟ್ಟರು ಪ್ರಾರ್ಥನೆಯ ನಂತರ ಹುಝೂರೆ ಅನ್ವರ್ (ಅಬಿಅ) ತಮ್ಮ ವಸತಿ ನಿಲಯಕ್ಕೆ ತೆರಳಿದರು.

### 30 ಸೆಪ್ಟೆಂಬರ್ ಶುಕ್ರವಾರ

ಹುಝೂರ್ ಅನ್ವರ್(ಅಬಿಅ) ಮುಂಜಾನೆ 5:50 ಕ್ಕೆ ಮಸ್ಜಿದ್ ಫತಹ ಅಝೀಮ್ ಆಗಮಿಸಿ ಫಜರ್ ನಮಾಝ್ ನಿರ್ವಹಿಸಿಕೊಟ್ಟರು. ನಮಾಝ್ ನಿರ್ವಹಣೆಯ ನಂತರ ತಮ್ಮ ವಸತಿನಿಲಯಕ್ಕೆ ತೆರಳಿದರು.

ಮುಂಜಾನೆ ಹುಝೂರ್ ಅನ್ವರ್(ಅಬಿಅ) ಕಚೇರಿಯ ಅಂಚೆಗಳನ್ನು ಪರಿಶೀಲಿಸಿದರು ಮತ್ತು ನಿರ್ದೇಶನಗಳನ್ನು ನೀಡಿದರು. ಹೀಗೆ ಹುಝೂರೆ ಅನ್ವರ್ ಕಚೇರಿ ಕಾರ್ಯಗಳಲ್ಲಿ ತಲ್ಲೀನರಾಗಿದ್ದರು.

ಇಂದು ಪವಿತ್ರ ಜುಮುಅ ದಿನವಾಗಿತ್ತು. ಇಂದಿನ ಈ ದಿವಸವು ಹಲವು ವಿಧದಲ್ಲಿ ಒಂದು ಐತಿಹಾಸಿಕ ದಿನವಾಗಿತ್ತು. ಅದು ಅಹ್ಮದಿಅತ್ ಇತಿಹಾಸದಲ್ಲಿ ಅವಿಸ್ಮರಣೀಯವಾಗಿ ಉಳಿಯುವುದು. ಇಂದು ಹುಝೂರೆ ಅನ್ವರ್ ಅವರ ಖುತುಬ ಜುಮುಅ ಅಲ್ಲದೇ ಡಾ॥ ಅಲೆಕ್ಸಂಡರ್ ಡೂಮಿಯ zion ನಗರದಲ್ಲಿ ಮಸ್ಜಿದ್ ಫತಿಹ ಅಝಿಮ್‌ನ ಉದ್ಘಾಟನೆ ಆಗಬೇಕಿತ್ತು. ಅದಲ್ಲದೆ ಇದು ಈ ನಾಡಿನಲ್ಲಿ ಖಲೀಫತುಲ್ ಮಸೀಹ್ ಒಬ್ಬರ MTA International ಮೂಲಕ ಇಡೀ ಲೋಕದಲ್ಲಿ ನೇರ ಪ್ರಸಾರವಾಗುವ ಪ್ರಥಮ ಕುತುಬ ಜುಮುಅ ಆಗಿತ್ತು.

ಇದಕ್ಕಿಂತ ಮುಂಚೆ ಅಮೇರಿಕಾದ ಪೂರ್ವಭಾಗ ವಾಷಿಂಗ್‌ಟನ್ D.C. Harrisbury ಮತ್ತು ದಕ್ಷಿಣ ಕ್ಷೇತ್ರದ ಹ್ಯೂಸ್ಟನ್ ಮತ್ತು ಪಶ್ಚಿಮ ಕ್ಷೇತ್ರದ ಲಾಸ್‌ಏಂಜಲೀಸ್ ಇಂದ ಹುಝೂರೆ ಅನ್ವರ್ ಅವರ ಜುಮುಅ ಕುತುಬಗಳು MTA ಮೇಲೆ ಪ್ರಸಾರಗೊಂಡಿದೆ.

ಡಾ॥ ಡೂಯಿ ಹೇಳಿದರು. ನಾನು ನಿರ್ಮಿಸಿದ zion ನಗರದಿಂದ ಇಸ್ಲಾಂ ಧರ್ಮದ ಧ್ವನಿಯನ್ನು ಅಡಗಿಸಿಬಿಡುವೆನು. ಇಸ್ಲಾಂ ಧರ್ಮದ ಹೆಸರು ಸಹ ಹೇಳುವವರು ಯಾರೂ ಇರಲಿಕ್ಕಿಲ್ಲ.

ಇಂದು ಅಲ್ಲಾಹನ ಅನುಗ್ರಹದಿಂದ ಹಝ್ರತ್ ಅಖ್‌ದಸ್ ಮಸೀಹ್ ಮೌಊದ್(ಅ) ರವರ ಖಲೀಫರ ನಾಲಿಗೆಯಿಂದ ದೇವವಾಣಿ (ಇಲ್‌ಹಾಮ್) ಫತಹ ಅಝೀಮ್ ನಿಂದ, ಕೇವಲ ಡೂಯಿ ನಗರದಲ್ಲಿ ಮಾತ್ರ ಇಸ್ಲಾಮಿನ ಧ್ವನಿ ಮೊಳಗುತ್ತಿಲ್ಲ. ಬದಲು ಇಲ್ಲಿಂದ ಡೂಯಿಯ ದೇಶ ಅಮೇರಿಕಾದಲ್ಲಿಯೂ ಈ ಧ್ವನಿ ಮೊಳಗುತ್ತಿದೆ. ಅದಕ್ಕಿಂತ ಹೆಚ್ಚಾಗಿ ಈ ಧ್ವನಿ ಇಲ್ಲಿಂದ ಪ್ರಪಂಚದಾದ್ಯಂತ, ಇಡೀ ಲೋಕದಲ್ಲಿ ದೇಶ ದೇಶಗಳಲ್ಲಿ, ಗ್ರಾಮ ಗ್ರಾಮಗಳಲ್ಲಿ, ಮನೆ ಮನೆಗಳಲ್ಲಿ ಆಲಿಸಲಾಗುತ್ತಿದೆ.

ಹಾಗೆ ಇಂದು ಈ ನಗರದ ಎಲ್ಲ ಭಾಗಗಳಿಂದ ಮತ್ತು ಇಲ್ಲಿಯ ಹಗಲಿರುಳಿನ ಕ್ಷಣ ಕ್ಷಣವು ಸಹ ಹಝುರತ್ ಅಖ್‌ದಸ್ ಮಸೀಹ್ ಮೌಊದ್(ಅ) ರವರ ಸತ್ಯತೆಯ ಸಾಕ್ಷ್ಯವನ್ನು ಹೇಳುತ್ತಿದೆ. "ಸುಜ್ಞಾನಲ್ಲ್ರಹ ಏ ಬಿಹಮ್ದಿಹಿ ಏ ಸುಬ್ಹಿನಲ್ಲಾಹಿಲ್ ಅಝೀಮ್."

ಜುಮುಅ ನಮಾಝಿನಲ್ಲಿ Zion ಜಮಾಅಅತ್ ಅಲ್ಲದೇ ಅಮೇರಿಕಾದ ವಿವಿಧ ಇತರ ಜಮಾಅತುಗಳಿಂದ ಜಮಾಅತ್ ಬಾಂಧವರು ಬಹು ದೂರ ದೂರದ ಪ್ರಯಾಣಗಳನ್ನು ಮಾಡಿ ಇಲ್ಲಿ ಭಾಗವಹಿಸಲು ಬಂದಿರುತ್ತಾರೆ. ಇಲ್ಲಿ ಬಂದು ಸೇರಿರುವವರಲ್ಲಿ ಬಹುದೊಡ್ಡ ಸಂಖ್ಯೆ ಒಂದು ಸಾವಿರದಿಂದ ಎರಡು ಸಾವಿರದ ಮೈಲುಗಳ ದೂರದ ಪ್ರವಾಸಮಾಡಿ ಬಂದವರಾಗಿದ್ದರು. ಜಮಾಅತ್ ನಮಾಝಿನಲ್ಲಿ ಭಾಗವಹಿಸಿದವರ ಸಂಖ್ಯೆ ಎರಡು ಸಾವಿರಕ್ಕಿಂತಲೂ ಹೆಚ್ಚಾಗಿತ್ತು.

ಅಮೇರಿಕಾ ಅಲ್ಲದೆ, ಯು.ಕೆ. ಜರ್ಮನಿ, ಸ್ವೀಡನ್, ಬ್ರಾಝೀಲ್, ಗಿಯಾನ, ಸುರೇನಾಮ್, ಪಾಕಿಸ್ತಾನ, ಕಬಾಬೀರ, ಕೆನಾಡ ಜಮಾಅತಿನ ಪ್ರತಿನಿಧಿಗಳು ಮತ್ತು ಇತರ ಬಾಂಧವರು ಈ ಮಸೀದಿಯ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಲು ಬಂದಿದ್ದರು.

ಕಾರ್ಯಕ್ರಮದನ್ವಯ 1 ಗಂಟೆಗೆ ಹುಝೂರ್ ಅನ್ವರ್(ಅಬಿಅ) ಮಸ್ಜಿದ್ ಫತಹ ಅಝೀಮ್ ಆಗಮಿಸಿದ್ದರು ಮತ್ತು ಕುತುಬ ಜುಮುಅ ನೀಡಿದರು. (ಈ ಖುತುಬದ ಸಾರಾಂಶ, 6 ಅಕ್ಟೋಬರ್ 2022 ರ ಪ್ರಕಟಗೊಂಡಿದೆ ಅಖ್ಬಾರೆ ಬದರ್ ಸಂಚಿಕೆ ಸಂಖ್ಯೆ 40 ರಲ್ಲಿ ಅದರ ಸಂಪೂರ್ಣ ಭಾಗ ಅದೇ ಸಂಚಿಕೆಯಲ್ಲಿ ಪರಿಶೀಲಿಸಬಹುದು.)

ಹುಝೂರ್ ಅನ್ವರ್(ಅಬಿಅ) ಅವರು ಈ ಕುತುಬ ಜುಮುಅ 1:50 ಗಂಟೆಯುವರೆಗೆ ಜಾರಿಯಲ್ಲಿತ್ತು. ನಂತರ ಹುಝೂರೆ ಅನ್ವರ್ ಜುಮುಅ ನಮಾಝ್‌ನೊಂದಿಗೆ ಅಸರ್ ನಮಾಝ್ ಒಟ್ಟುಗೂಡಿಸಿ ನಿರ್ವಹಿಸಿಕೊಟ್ಟರು. ನಮಾಝ್ ನಿರ್ವಹಣೆಯ ನಂತರ ಹುಝೂರೆ ಅನ್ವರ್ ತಮ್ಮ ವಸತಿಯತ್ತ ತೆರಳಿದರು.

(ಮುಂದುವರಿಯುವುದು)

**ಪ್ರೀತಿ ಎಲ್ಲರಲ್ಲೂ, ದ್ವೇಶವಿಲ್ಲ ಯಾರಲ್ಲೂ**
**Love for All, Hatred for None**

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE : 1800-103-2131**
**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**
**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.